**ಪಾಂಡವಪುರ ತಾಲೂಕಿನ ಶಾಸನ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಗತಿಗಳು**

ನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಶಾಸನಗಳು ಪ್ರಮುಖ ಆಧಾರಗಾಳಗಿ ನಿಲ್ಲುತ್ತವೆ. ಆಯಾಯ ಕಾಲದ ರಾಜ ಮಹಾರಾಜರುಗಳು ತಾವು ಮಾಡಿದ ಆಡಳಿತದ ಸಾಕ್ಷಿಗಳನ್ನು ಶಸನಗಳಲ್ಲಿ ಕೆತ್ತಿಸುತ್ತಿದ್ದರು. ಆ ಶಾಸನಗಳಲ್ಲಿ ಕೆತ್ತಿಸಿದ ಮಾಹಿತಿಗಳು ಅಳಿಸದಂತೆ ಹತ್ತಾರು ಶತಮಾನಗಳ ಕಾಲದವರೆಗೆ ಶಾಶ್ವತವಾಗಿರಲೆಂದು ಬಯಸಿದ್ದರು. ಇಂತಹ ಶಾಸನಗವಳ ಆಧಾರದಿಂದ ನಾವು ಇಂದು ಅವುಗಳನ್ನು ಓದುವ ಹಾಗೂ ಅವುಗಳ ಮೂಲಕ ಒಂದು ನೆಲದ ಇತಿಹಾಸ, ರಾಜಾಡಳಿತ, ದಾಳಿ, ದಂಡಯಾತ್ರೆಗಳು, ದಾನ–ದತ್ತಿ, ಕೊಡುಗೆ, ಬಿರುದು–ಬಾವಲಿಗಳು,ಕೆರೆ,ಕಟ್ಟೆ, ದೇಗುಲ ಹೀಗೆ ಅಳಿದ ಹಾಗೂ ಆಳಿದ ಪರಂಪರೆಯ ಸಂಸ್ಕೃತಿಯ ವಿವಿಧ ಮಜಲುಗಳನ್ನು ಅಧ್ಯಯನಕ್ಕೊಳಗುಮಾಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪಾಂಡವಪುರ ತಾಲೂಕಿನ ಸಂಸ್ಕೃತಿಯ ಹುಡುಕಾಟ ಮಾಡಲು ಸಾಧ್ಯವಿದೆ.

ಸುಮಾರು ನಾಲ್ಕನೇ ಶತಮಾನದಿಂದಲೂ ದಕ್ಷಿಣ ಕರ್ನಾಟಕವನ್ನು ಆಳಿದ ಅರಸರುಗಳಾದ ತಲಕಾಡಿನ ಗಂಗರೆಂದೇ ಪ್ರಸಿದ್ದರಾದ ಗಂಗರು ತಲಕಾಡು, ಕುವಸಾಲಪುರ ಕೋಲಾರ ಮತ್ತು ಬೆಂಗಳೂರಿನ ಮಣ್ಣೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಗಂಗವಾಡಿ – 96000 ಪ್ರಾಂತ್ಯದಲ್ಲಿ ಸುಭದ್ರ ಸಾಮ್ರಾಜ್ಯದ ಸ್ಥಾಪನೆಯನ್ನು ಮಾಡಿದರೆಂಬ ಅಂಶವು ಸ್ಪಷ್ಟವಾಗುತ್ತದೆ. ದುರ್ವಿನೀತ ಕೊಂಗುಣಿವರ್ಮ, ಹರಿವರ್ಮ, ಒಂದನೆ ಶಿವಮಾರ, ಶ್ರೀಪುರುಷ ಪೃಥ್ವಿಗಂಗ, ಮುಮ್ಮಡಿರಾಚಮಲ್ಲ, ಇಮ್ಮಡಿರಾಚಮಲ್ಲ ಮೊದಲಾದವರು ಈ ವಂಶದಲ್ಲಿ ಆಳಿದ ಅರಸರುಗಳಾಗಿದ್ದಾರೆ. ತಲಕಾಡು ಪಾಂಡವಪುರ ತಾಲ್ಲೂಕಿಗೆ ಸಮೀಪವಿರುವುದರಿಂದ ಇಲ್ಲಿನ ತೊಣ್ಣೂರು, ಮೇಲುಕೋಟೆ, ಚಿನಕುರುಳಿ ಪ್ರದೇಶಗಳು ನೇರವಾಗಿ ಅವರ ಆಡಳಿತ ಸಂಪರ್ಕದಲ್ಲಿದ್ದವು. ಗಂಗರ ಹೆಸರನ್ನೇ ಹೋಲುವ ಚಿಕ್ಕಗಂಗವಾಡಿ ಮತ್ತು ದೊಡ್ಡಗಂಗವಾಡಿ ಎಂಬ ಎರಡು ಅವಳಿ ಗ್ರಾಮಗಳು ಪಾಂಡವಪುರ ತಾಲ್ಲೂಕಿನ ಗಡಿಗ್ರಾಮಗಳಾಗಿವೆ. ಇವಕ್ಕೂ ಅವರಿಗೂ ಸಂಬಂಧವಿರುವುದಾಗಿ ತಿಳಿಸುವ ಶಾಸನವೊಂದಿದೆ.

ಶ್ರೀರಂಗಪಟ್ಟದಲ್ಲಿ (ಗಂಜಾಂ) ದೊರೆತ ತಾಮ್ರಪಟದಲ್ಲಿ ಕೊಂಗುಣಿವರ್ಮನಿಂದ ಮೊದಲಾದ ಗಂಗ ವಂಶಾವಳಿಯನ್ನು ಕೊಡಲಾಗಿದೆ. 'ಗಂಗರ ಪ್ರಮುಖ ಪ್ರಾಂತ್ಯವಾದ ಚಿಕ್ಕ ಗಂಗವಾಡಿಯು ಗಂಗವಾಡಿ 96000ದ ಆಡಳಿತ ವಿಭಾಗದ ಕೇಂದ್ರ ಮತ್ತು ಪ್ರಮುಖ ಪ್ರಾಚೀನ ನಗರವಾಗಿತ್ತೆಂದು'[1] ತಿಳಿಯುತ್ತದೆ. ಪಾಂಡವಪುರ ತಾಲ್ಲೂಕಿನ ಮಲ್ಲಿಗೆರೆ ಗ್ರಾಮದ ಶಾಸನವು 906–07 ಕಾಲದ್ದಾಗಿದ್ದು ಇಮ್ಮಡಿ ರಾಚಮಲ್ಲ ಮತ್ತು ಎರೆಯಪ್ಪರಸರುಗಳು ಆಡಳಿತ ನಡೆಸುತ್ತಿದ್ದುದರ ಬಗ್ಗೆ ವಿವರಿಸುತ್ತದೆ. ಅದರಲ್ಲಿ 'ಸತ್ಯವಾಕ್ಯಪೆರ್ಮಾನಡಿ'[2] ಎಂದು ಉಲ್ಲೇಖಿಸಲಾಗಿದ್ದು 2ನೇ ರಾಚಮಲ್ಲನನ್ನೇ ಪೆರ್ಮಾನಡಿ ಎಂದು ಹೇಳಲಾಗುತ್ತಿದೆ. ಕ್ಯಾತನಹಳ್ಳಿಯ ಶಾಸನವೊಂದರಲ್ಲಿ 'ಜಾಗಿ ಪೆರ್ಮಾನಡಿ ಎಂಬ ಅಧಿಕಾರಿಯು ಕಟ್ಟಿಸಿದ ಕಲ್ಲಬಸದಿಗೆ ಸತ್ಯವಾಕ್ಯ ಪೆರ್ಮಾನಡಿ ಮತ್ತು ಎರೆಯಪ್ಪರಸನು ದಾನಗಳನ್ನು ನೀಡಿದುದಾಗಿ ಉಲ್ಲೇಖ ಮಾಡಲಾಗಿದೆ'.[3] 'ಕನ್ನಂಬಾಡಿ ಜಲಾಶಯದಲ್ಲಿ ಮುಳುಗಡೆಯಾಗಿರುವ ಕನ್ನಂಬಾಡಿ ಅಗ್ರಹಾರವು ಒಂದನೆಕೃಷ್ಣನಿಂದ ಸ್ಥಾಪಿಸಲ್ಪಟ್ಟಿದ್ದು ಅಲ್ಲಿನ ಸುಂದರ ಕನ್ನೇಶ್ವರ ಗುಡಿಯು ಇವನ ನಿರ್ಮಾಣವೆಂದು ಹೇಳುತ್ತಾರೆ. ಇದಕ್ಕೆ ಪೂರಕವಾಗಿ ಕಡಬ ತಾಮ್ರಶಾಸನವನ್ನು ವಿದ್ವಾಂಸರು ಉಲ್ಲೇಖಿಸುತ್ತಾರೆ'.[4] ರಾಷ್ಟ್ರಕೂಟರ ದೊರೆ ಧ್ರುವನು ಗಂಗರ 2ನೇ ಶಿವಮಾರನ ವಿರುದ್ಧ ಮುದಗಂದೂರು ಯುದ್ಧದಲ್ಲಿ ಸೋಲಿಸಿ ತನ್ನ ಮಗನಾದ ಸ್ಥಂಭನನ್ನು ಗಂಗವಾಡಿಯ ರಾಜ್ಯಪಾಲನನ್ನಾಗಿ ನೇಮಿಸಿದ್ದನು. ನಂತರ ಗಂಗರು ಕ್ರಿ.ಶ. 938ರಿಂದ ರಾಷ್ಟ್ರಕೂಟರ ಸಾಮಂತ ರಾಜರಾಗಿ ಆಳ್ವಿಕೆ ನಡೆಸಿದರು. ನಂತರದ ದಿನಗಳಲ್ಲಿ ಚಾಲುಕ್ಯರು ಪ್ರಬಲರಾಗುತ್ತಾಬಂದು ರಾಷ್ಟ್ರಕೂಟರ ಮೇಲೆ ಅಧಿಕಾರ ಸ್ಥಾಪಿಸಲು ತೊಡಗಿದರು. ಕ್ರಿ.ಶ. 973ರಲ್ಲಿ 2ನೇ ತೈಲಪನು ಗಂಗವಾಡಿಯ ಉತ್ತರಭಾಗಗಳು, ಚಾಲುಕ್ಯರ ಸಾಮ್ರಾಜ್ಯಕ್ಕೆ ವಿಲೀನಗೊಳ್ಳುವಂತೆ ಮಾಡಿದನು. ದಕ್ಷಿಣ ಭಾಗದ ಕೆಲವೇ ಪ್ರದೇಶಗಳನ್ನು ಆಳುತ್ತಿದ್ದ ಗಂಗರು ದುರ್ಬಲರಾದ ಕಾರಣ ಮುಂದೆ ಚೋಳರ ದೊರೆ ರಾಜರಾಜ ಚೋಳನಿಂದ ಸಾಮ್ರಾಜ್ಯ ಸ್ಥಾಪನೆಯಾದ ನಂತರ ಗಂಗರು ಅವನತಿಯ ಹಾದಿಯನ್ನು ಹಿಡಿದರು.

ಗಂಗರ ಆಡಳಿತಾವಧಿಯಲ್ಲಿ ಜೈನಧರ್ಮವು ಪ್ರಚಾರಗೊಂಡಿತು. ಶೈವ ಮತಾವಲಂಭಿಗಳಾದ ಗಂಗರು ತಲಕಾಡನ್ನು ಕೇಂದ್ರವನ್ನಾಗಿಸಿಕೊಂಡಿದ್ದರಿಂದ ಅಲ್ಲಿ ಅರಕೇಶ್ವರ, ಪಾತಾಳೇಶ್ವರ ಮರುಳೇಶ್ವರ ದೇವಾಲಯಗಳನ್ನು ನಿರ್ಮಿಸಿದರು. 'ಗಜಲಾಂಛನ'ವನ್ನು ಹೊಂದಿದ ಗಂಗರು ದೇಗುಲಗಳ ಸುತ್ತಲೂ ಗಜ ಚಿಹ್ನೆಗಳನ್ನು ಕೆತ್ತಿಸಿದ್ದಾರೆ. 'ಗಂಗರಸ ಶ್ರೀಪುರುಷನ ಅದೀನದಲ್ಲಿ ಪಾಳೇಗಾರನೊಬ್ಬ ನಾಗಮಂಗಲದ ಕಂಬದಹಳ್ಳಿಯಲ್ಲಿ ಅಧಿಕಾರ ನಿರ್ವಹಿಸುತ್ತಿದ್ದನೆಂದು'[5] ತಿಳಿದುಬರುತ್ತದೆ.

1

ನಾಗಮಂಗಲದ ಜಿನಾಲಯಗಳು, ಪಂಚಕೂಟ ಬಸದಿಗಳು, ಇವರ ಕಾಲದ ಕೊಡುಗೆಗಳಾಗಿವೆ. ಆಡಳಿತ, ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ಗಂಗರಸರ ಕೊಡುಗೆ ಬಹಳವಾಗಿದೆ. ಗಂಗರಸರನ್ನು ಸಂಪೂರ್ಣವಾಗಿ ಸೋಲಿಸಿ ಚೋಳ ರಾಜಕುಲಗಳು ಅಧಿಕಾರಕ್ಕೆ ಬಂದುದರಿಂದ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಧಾರ್ಮಿಕ ಕ್ಷೇತ್ರವಾಗಿ ಹೊಸ ಹೊಸ ರೂಪಗಳನ್ನು ತಿಳಿಯಲು ಕಾರಣವಾಗಿದೆ.

ಕರ್ನಾಟಕದಲ್ಲಿ ಗಂಗರಸರ ಆಳ್ವಿಕೆಯನ್ನು ಕೊನೆಗೊಳಿಸಿ ಅವರ ಸಾಮ್ರಾಜ್ಯದ ಮೇಲೆ ಚೋಳರು ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು. ಕ್ರಿ.ಶ. 1000ದಲ್ಲಿ ಮೊದಲನೆ ರಾಜರಾಜಚೋಳನಿಂದ ಆರಂಭಗೊಂಡು 1ನೇ ಕುಲೋತ್ತುಂಗನವರೆಗೆ ಒಂದು ಶತಮಾನಗಳ ಕಾಲ ಚೋಳರ ಅದೀನದಲ್ಲಿದ್ದವು. ಗಂಗರಸರ ಆಡಳಿತ ಪ್ರದೇಶಗಳಾದ ಮಂಡ್ಯ, ಮೈಸೂರು, ಕೊಡಗು, ಕೋಲಾರ, ಬೆಂಗಳೂರು ಜಿಲ್ಲೆಗಳು ಇವರ ಆಳ್ವಿಕೆಗೆ ಬಂದವು. ಚೋಳರಾಜರು ತಾವುಗಳು ಆಕ್ರಮಿಸಿದ ಪ್ರದೇಶಗಳಿಗೆ ತಂತಮ್ಮ ಹೆಸರುಗಳನ್ನಿಡುವುದರ ಮೂಲಕ ಪುನರ್‌ನಾಮಕರಣ ಮಾಡಿಕೊಂಡಿದ್ದುದು ತಿಳಿದುಬರುತ್ತದೆ. ಪರಿಣಾಮವಾಗಿ ಗಂಗರ ರಾಜಧಾನಿ ತಲಕಾಡು 'ರಾಜ ರಾಜಪುರಂ' ಎಂಬ ಹೆಸರನ್ನು ಪಡೆದರೆ ಮಾಲಿಂಗಿಯು 'ಜನತಾಪುರ' ಎಂದಾದರೆ ಗಂಗವಾಡಿಯು 'ಮುಡಿಗೊಂಡ ಚೋಳ ಮಂಡಲ' ಎಂಬ ಹೊಸ ನಾಮ ಹೊಂದಿತು. ನಂತರ 'ಗಂಗೈಕೊಂಡ ಚೋಳ ಮಂಡಲ' ಎಂಬುದಾಗಿ ಕರೆಯಲ್ಪಟ್ಟುದನ್ನು ಗಮನಿಸಬಹುದಾಗಿದೆ.

ಇವರ ಆಡಳಿತ ಕಾಲದ ಏಳೂ ಶಾಸನಗಳು ಹಲವಾರು ವಿಚಾರಗಳನ್ನು ಪ್ರಚುರಪಡಿಸುತ್ತವೆ. ಚಿನಕುರುಳಿ ಗ್ರಾಮದ ಪ್ರವಾಸಿ ಮಂದಿರದ ದಾರಿಯಲ್ಲಿನ ವೀರಗಲ್ಲು ಶಾಸನವು 1011 ಕಾಲದ್ದಾಗಿದೆ. ಬಂಗಲಿ ಎರೆಯಮ್ಮನ ಮಗ ನಾಗಯ್ಯನೆಂಬುವವನು ಹಸುಗಳ ರಕ್ಷಣೆಗಾಗಿ ಹೋರಾಡಿ ಮಡಿದ ದನಗಾಹಿಯ ಬಗ್ಗೆ ವಿವರಿಸಿದೆ[6]. ಕನ್ನಂಬಾಡಿಯ ಕಣ್ಣೇಶ್ವರ ದೇವಾಲಯದಲ್ಲಿನ ಶಾಸನವೊಂದು ಮಾದಿಯಣ್ಣ ಮತ್ತು ಲಕ್ಕಣ್ಣ ಎಂಬ ಅಧಿಕಾರಿಗಳು ದೇವಾಲಯ ನಿರ್ಮಿಸಿದ ವಿಚಾರವನ್ನೂ, ಬೊಮ್ಮಗಾವುಂಡ, ಮಾಚಗಾವುಂಡರು ಕೊಂಗಜೀಯರ್‌ಗೆ ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ.

ಚೋಳರು ತಮಿಳುನಾಡಿನಲ್ಲಿದ್ದ ಅಗ್ರಹಾರ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಜಾರಿಗೊಳಿಸಿರುವುದು ಸ್ಪಷ್ಟವಾಗುತ್ತದೆ. ದೇವಾಲಯಗಳನ್ನು ನಿರ್ಮಿಸಿ ಅವುಗಳಿಗೆ ತಮಿಳು ಬ್ರಾಹ್ಮಣರನ್ನು ಅರ್ಚಕ ಸ್ಥಾನಕ್ಕೆ ನೇಮಿಸುವುದು, ಅವರುಗಳಿಗೆ ಮತ್ತು ದೇಗುಲ ನಿರ್ವಹಣೆಯ ನೆಪದಲ್ಲಿ ದಾನ ದತ್ತಿಗಳನ್ನು ನೀಡಿ ರಕ್ಷಿಸುವ ಮೂಲಕ ಚೋಳ ಸಂಸ್ಕೃತಿ ಕರ್ನಾಟಕದಲ್ಲಿ ಬೇರೂರಲು ಕಾರಣರಾದರು. ಪರಿಣಾಮವಾಗಿ ತಮಿಳು ಭಾಷೆ ದೇಗುಲಭಾಷೆಯಾಗಿ ಮೇಲ್ಮೆಯನ್ನು ಸಾಧಿಸಿತು. ಬಹುಶಃ ಶ್ರೀರಂಗಪಟ್ಟಣದ ಬೊಮ್ಮೂರು ಅಗ್ರಹಾರ, ಶ್ರೀನಿವಾಸ ಅಗ್ರಹಾರ, ಕೆ.ಆರ್.ಪೇಟೆಯ ಅಗ್ರಹಾರ ಬಾಚಹಳ್ಳಿಗಳು ಚೋಳರ ಕಾಲದಲ್ಲಿ ಸ್ಥಾಪನೆಗೊಂಡಿರುವುದನ್ನು ಊಹಿಸಬಹುದಾಗಿದೆ. "ಅಗರ, ಮಾಲಿಂಗಿ ಬನ್ನೂರು, ಮಾರೆಹಳ್ಳಿ ಮತ್ತು ಮಳೂರುಗಳಲ್ಲಿ ವೈಷ್ಣವ ದೇಗುಲಗಳು ನಿರ್ಮಾಣವಾದವು. ತಮಿಳಿನ ಬ್ರಾಹ್ಮಣ ಪೂಜಾರಿಗಳು ಪೂಜಾಕಾರ್ಯಗಳಿಗೆ ನೇಮಿಸಲ್ಪಟ್ಟರು. ತಮಿಳು ಭಾಷೆ ಪ್ರಚಾರಪಡಿಸಲ್ಪಟ್ಟಿತು. ಕರ್ನಾಟಕದ ಕಲೆ, ಶಿಲ್ಪಕಲೆ ಆಚರಣೆಗಳ ಮೇಲೆ ತಮಿಳರ ಪ್ರಭಾವವುಂಟಾಯಿತು"[7] ಇವುಗಳು ಕರ್ನಾಟಕದಲ್ಲಿ ವೈಷ್ಣವರ ಭಕ್ತಿ ಚಳುವಳಿ ಮೇಲೆ ಪ್ರಭಾವಬೀರಿತು ಮೇಲುಕೋಟೆ ವೈಷ್ಣವರ ಕೇಂದ್ರವಾಗಲು ನಾಂದಿಯಾದುದನ್ನು ಗಮನಿಸಬಹುದಾಗಿದೆ.

ಕರ್ನಾಟಕವನ್ನಾಳಿದ ಬಹುತೇಕ ರಾಜಮನೆತನಗಳ ಪೈಕಿ ಹೊಯ್ಸಳರು ಅತ್ಯಂತ ಪ್ರಮುಖರು. ವಿನಯಾದಿತ್ಯದಿಂದ ಇಮ್ಮಡಿ ನರಸಿಂಹನವರೆಗೆ ಆಳಿದ ಅರಸರುಗಳಲ್ಲಿ ಬಿಟ್ಟಿದೇವ ಪ್ರಮುಖನಾಗುತ್ತಾನೆ. ಆಡಳಿತಾತ್ಮಕವಾಗಿ, ರಾಜಕೀಯವಾಗಿ ಮತ್ತು ಧಾರ್ಮಿಕವಾಗಿ ಜನಪ್ರಿಯನಾದ ವಿಷ್ಣುವರ್ಧನನು ಚೋಳರವಶದಲ್ಲಿದ್ದ ತಲಕಾಡನ್ನು ವಶಪಡಿಸಿಕೊಂಡು ಅವರನ್ನು ಕರ್ನಾಟಕದಿಂದ ಕಾಲ್ತೆಗೆಯುವಂಎ ಮಾಡಿ 'ತಲಕಾಡುಗೊಂಡ' ಎಂಬ ಬಿರುದಾಂಕಿತನಾದನು. "ಮಂಡ್ಯ ಜಿಲ್ಲೆಯ ತೊಣ್ಣೂರು ಹೊಯ್ಸಳ ಕಾಲದಲ್ಲಿ ಒಂದು ಪ್ರಮುಖ ಆಡಳಿತ ಕೇಂದ್ರವಾಗಿದ್ದು ಇದು ಅವರ ದ್ವಿತೀಯ ರಾಜಧಾನಿಯಾಗಿತ್ತೆಂಬ ಅಭಿಪ್ರಾಯವಿದೆ"[8]. ಬೆಳಗೊಳದಲ್ಲಿ ಆಡಳಿತ ನಡೆಸುತ್ತಿದ್ದಾಗ ವಿಷ್ಣುವರ್ಧನನು ಅದನ್ನು "ಚತುರ್ವೇದಿ ಮಂಗಳಂ" ಎಂದು ಕರೆದಿರುವುದು ಉಲ್ಲೇಖಾರ್ಹವಾಗಿದೆ.

ಜೈನಮತಾವಲಂಬಿಯಾದ ಬಿಟ್ಟಿದೇವನು ಮಂಡ್ಯ ಜಿಲ್ಲೆಯ ಹಲವಾರು ಪ್ರದೇಶಗಳಲ್ಲಿ ಜೈನ ನೆಲೆಯನ್ನು ಸ್ಥಾಪಿಸುತ್ತಾನೆ. ತಮಿಳುನಾಡಿನಲ್ಲಿ ಸಂಭವಿಸಿದ ಧಾರ್ಮಿಕ ಪಲ್ಲಟಗಳಿಂದ ತಲೆಮರೆಸಿಕೊಂಡು ಕರ್ನಾಟಕವನ್ನು ಪ್ರವೇಶಿಸಿದ ರಾಮಾನುಜರು ಚುಂಚನಕಟ್ಟೆ ಮತ್ತು ತೊಣ್ಣೂರುಗಳಲ್ಲಿ ನೆಲೆಗೊಳ್ಳುತ್ತಾರೆ. ಅವರು ಬಿಟ್ಟಿದೇವನ ಮಗಳಿಗೆ ಹಿಡಿದಿದ್ದ ರೋಗಗಳನ್ನು ವಾಸಿಮಾಡಿದ ಕಾರಣದಿಂದಾಗಿ ಬಿಟ್ಟಿದೇವನು ವೈಷ್ಣವ ಮತವನ್ನು ಸ್ವೀಕರಿಸಿ ವಿಷ್ಣುವರ್ಧನನಾಗುತ್ತಾನೆ ಎಂಬ ಕತೆಯಿದೆ. ನಂತರ ರಾಮಾನುಜರ ಆದೇಶಗಳಿಗನುಸಾರವಾಗಿ ತೊಣ್ಣೂರು ಮತ್ತು ಮೇಲುಕೋಟೆಯನ್ನು ಪ್ರಸಿದ್ಧ ವೈಷ್ಣವಕ್ಷೇತ್ರವಾಗಿ ಪರಿವರ್ತಿಸಲು ಸಾಧ್ಯವಾಯಿತು. ನಂತರ ಆ ಪ್ರದೇಶಗಳಲ್ಲಿ ಜೈನಧರ್ಮ ಕಳೆಗುಂದಲಾರಂಭಿಸಿತು. "ವಿಷ್ಣುವರ್ಧನನು ತನ್ನ ಕಾಲದಲ್ಲಿ ತಮ್ಮ ಸಾಮ್ರಾಜ್ಯದಾದ್ಯಂತ ಹಲವು ದೇವಾಲಯಗಳನ್ನು ನಿರ್ಮಾಣಗೊಳಿಸುತ್ತಾನೆ. ಚೋಳಶೈಲಿಗಿಂತ ವಿಭಿನ್ನವಾದ 'ಹೊಯ್ಸಳ ಶೈಲಿ'ಯೆಂಬ ಹೊಸ ಶೈಲಿಯೇ ಅಸ್ಥಿತ್ವಕ್ಕೆ ಬಂದಿತು. ಮೇಲುಕೋಟೆ, ತೊಣ್ಣೂರು ಹರಪನಹಳ್ಳಿ, ಸುತ್ತೂರು, ಹೆಡತಲೆ, ರಾಘವಾಪುರ, ಬೇಲೂರು, ಹಳೇಬೀಡು, ಸೋಮನಾಥಪುರ ಮುಂತಾದ ಕಡೆಗಳಲ್ಲಿ ಜಗದ್ವಿಖ್ಯಾತ ಹೊಯ್ಸಳ ಶೈಲಿಯ ದೇವಾಲಯಗಳು ನಿರ್ಮಾಣಗೊಂಡವು"[9] ಇಂದಿಗೂ ಜೈನ ಬಸದಿಯ ಅವಶೇಷಗಳು ಕನ್ನಂಬಾಡಿಯ ನೀರಿನಲ್ಲಿ ಅವಶೇಷಗಳಾಗಿರುವುದನ್ನು ಸ್ಮರಿಸಬಹುದಾಗಿದೆ. ಅವು ಜೈನಧರ್ಮದ ಇತಿಹಾಸ ಪಳೆಯುಳಿಕೆಗಳಾಗಿವೆ. ಹೊಯ್ಸಳರ ಉಪರಾಜಧಾನಿಯಾದ ತೊಣ್ಣೂರು ಹೊಯ್ಸಳರ ಕಾಲದಲ್ಲಿ ಕೀರ್ತಿದಾಯಕವಾಯಿತು.

ವಿಷ್ಣುವರ್ಧನನು ನಿರ್ಮಿಸಲಾದ ಪಂಚನಾರಾಯಣ ದೇವಾಲಯಗಳ ಪೈಕಿ ನಂಬಿನಾರಾಯಣ ಅಥವಾ ಲಕ್ಷ್ಮಿನಾರಾಯಣ ದೇಗುಲ ತೊಣ್ಣೂರಿನಲ್ಲಿ ನಿರ್ಮಾಣಗೊಂಡಿದೆ. ಅಲ್ಲದೆ ನರಸಿಂಹದೇವಾಲಯ ಕೃಷ್ಣದೇವಾಲಯ ಮತ್ತು ಕೈಲಾಸೇಶ್ವರ ದೇವಾಲಯಗಳು ಪ್ರಮುಖವಾದವು. ಇವರ ಆಡಳಿತಾವಧಿಯ ಬೇರೆ ಬೇರೆ ಕಾಲಘಟ್ಟಗಳಲ್ಲಿ ಮೇಲುಕೋಟೆಯ ಚಲುವನಾರಾಯಣ, ಶ್ರೀರಂಗಪಟ್ಟಣದ ರಂಗನಾಥದೇಗುಲ, ನಾಗಮಂಗಲದ ಸೌಮ್ಯನರಸಿಂಹ, ಮದ್ದೂರಿನ ನರಸಿಂಹಸ್ವಾಮಿ, ಹೊಸಹೊಳಲಿನ ಲಕ್ಷ್ಮೀನರಸಿಂಹ ದೇಗುಲ. ಸೋಮನಾಥಪುರದ ದೇಗುಲಗಳು ಈ ಸುತ್ತಿನ ಪ್ರಮುಖ ದೇವಾಲಯಗಳಾಗಿವೆ. ವೈಷ್ಣವ ಪರಂಪರೆ ಔನ್ನತ್ಯಕ್ಕೇರಿ ಪ್ರಧಾನ ಧರ್ಮವಾಗಿ ಹೊರಹೊಮ್ಮಲು ಹೊಯ್ಸಳರ ಕೊಡುಗೆ ಅವಿಸ್ಮರಣೀಯವಾದುದು.

ಮಂಡ್ಯ ಜಿಲ್ಲೆಯ ಇತಿಹಾಸವನ್ನು ನಿರ್ಮಿಸುವಲ್ಲಿ ಹೊಯ್ಸಳರ ಕೊಡುಗೆಯನ್ನು ಮರೆಯಲಾಗದು ಲಭ್ಯವಿರುವ ಶಾಸನಗಳಲ್ಲಿ ಹೊಯ್ಸಳರದು ಸಿಂಹಪಾಲು ಸಂಸ್ಕೃತ ಮಿಶ್ರಿತ, ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ರಚಿತವಾಗಿರುವ ಇವುಗಳು ಅವರ ಉದಯ, ಆಡಳಿತ, ಕೊಡುಗೆ, ರಾಜಕೀಯ ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳನ್ನು ತಿಳಿಸುವುದಲ್ಲದೆ. ಒಂದು ಇತಿಹಾಸ ನಿರ್ಮಾಣಕ್ಕೆ ಅಡಿಗಲ್ಲುಗಳಾಗುತ್ತವೆ. ಶಾಸನಗಳಲ್ಲಿ ದೊರೆಯುವ ಮಾಹಿತಿಗಳ ಪ್ರಕಾರ ಬಿಟ್ಟಿದೇವ, ವಿಷ್ಣುವರ್ಧನ ಎಂಬ ಹೆಸರುಗಳು ಹೆಚ್ಚಾಗಿ ಉಲ್ಲೇಖಿತವಾದಂತೆ ಕಂಡು ಬರುವುದಿಲ್ಲ. ವಿಷ್ಣುವರ್ಧನನ ತಾಯಿ ಮಾದಳದೇವಿ, ಪ್ರಧಾನ ದಂಡನಾಯಕನಾದ ಲಿಂಗಪಯ್ಯ, 3ನೇ ಬಲ್ಲಾಳನ ಕಾಲದ ನಾಗಿದೇವ, ಮಾದಪ್ಪ ಢಣಾಯಕರ ಹೆಸರುಗಳು ಪ್ರಸ್ತಾಪವಾಗಿವೆ. ವಿಷ್ಣುವರ್ಧನನು ತಾನು ಮಾಡಿದ ಕೆಲಸಗಳನ್ನು ನಾಮಸಹಿತ ಶಾಸನ ರೂಪದಲ್ಲಿ ಉಲ್ಲೇಖಗೊಳಿಸುವ ಇಚ್ಛೆಯನ್ನು ವ್ಯಕ್ತಪಡಿಸಿಲ್ಲದಿರುವುದನ್ನು ಕಾಣಬಹುದಾಗಿದೆ. ಅವನ ಆಡಳಿತದ ಕಾಲ ಮತ್ತು ಆ ಕಾಲದ ಶಾಸನಗಳ ವಿವರಗಳನ್ನಾಧರಿಸಿ ಇವನ ಕೆಲಸಗಳೆಂದು ಅರಿಯಬಹುದಾಗಿದೆ.

ಕ್ರಿ.ಶ. 1118ರ ಕನ್ನಂಬಾಡಿಯ ಶಾಸನವು ವಿಷ್ಣುವರ್ಧನನ್ನು ಚೋಳರನ್ನು ಹೊಡೆದೋಡಿಸಿದ ನಂತರ ತಲಕಾಡಿನಲ್ಲೇ ಇದ್ದು ಆಡಳಿತ ವ್ಯವಸ್ಥೆಯನ್ನು ಸರಿಪಡಿಸುತ್ತಿದ್ದ ವಿಚಾರವನ್ನು ಪ್ರಸ್ತಾಪಿಸುತ್ತದೆ. ಜೊತೆಗೆ ತಲಕಾಡನ್ನು ತಾತ್ಕಾಲಿಕ ನೆಲೆಯನ್ನಾಗಿ ಮಾಡಿಕೊಂಡಿದ್ದ ವಿಷಯ ಬೆಳಕಿಗೆ ಬರುತ್ತದೆ. "ಅದರ ಪ್ರಕಾರ ಕನ್ನಂಬಾಡಿಯ ಕನಗೊಂಡೇಶ್ವರ ದೇಗುಲವು ಕಣ್ಣಪ್ಪನ ಹಿನ್ನೆಲೆಯದಾದರೂ ಕನ್ನಂಬಾಡಿ ಮತ್ತು ಕನ್ನದೇವನೆಂಬ ವ್ಯಕ್ತಿಗೂ ಸಂಬಂಧವಿರುವಂತೆ ತೋರುತ್ತದೆ".[10] ಶಂಭುವನಹಳ್ಳಿಯ 11ನೆಯ ಶಾಸನವೊಂದು ವಿಷ್ಣುವರ್ಧನನ ತಾಯಿ ಶಂಭುವನ ಹಳ್ಳಿಯ 11ನೆಯ ತುವ್ವಲೇಶ್ವರ ದೇವರಿಗೆ ಯಾದವ ಪುರವನ್ನು ದಾನವಾಗಿ ನೀಡಿ ಆ ಗ್ರಾಮದಕ್ಕೆ ಮೊದಲಿದ್ದ ಯಾದವಪುರ ಬದಲಾಗಿ ಶಂಕರನಹಳ್ಳಿಯೆಂದು ಪುನರ್ ನಾಮಕರಣಗೊಳಿಸಿದುದು ತಿಳಿಯುತ್ತದೆ.[11] ವಿಷ್ಣುವರ್ಧನನಿಗೆ ಬಿರುದುಗಳಾದ ಮಹಾಮಂಡಲೇಶ್ವರ, ತ್ರಿಭುವನಮಲ್ಲ ತಳಕಾಡುಗೊಂಡ ಎಂಬ ಬಿರುದುಗಳಿದ್ದು ಅವರ ಪ್ರಬಲ ಆಡಳಿತ ಬಗ್ಗೆ ವಿವರಣೆಯನ್ನೊದಗಿಸುತ್ತದೆ.

ಕ್ರಿ.ಶ. 1175ರ ಕ್ಯಾತನಹಳ್ಳಿಯ ಶಾಸನವು ಯಾದವನಾರಾಯಣಪುರ, ಚತುರ್ವೇದಿ ಮಂಗಲ ಅಂದರೆ ತೊಂಡನೂರಿನ ಅಗ್ರಹಾರದ ಶ್ರೀಕರಣದ ಕಲಿಯಣ್ಣನ ಕೊಡುಗೆಯು ಗದ್ದೆ, ಬೆದ್ದಲುಗಳಲ್ಲಿ ಸ್ವಲ್ಪ ಭಾಗವನ್ನು ಹೊನ್ನು ಕೊಟ್ಟು ಕ್ರಮಕ್ಕೆ ಕೊಂಡು, ಅದನ್ನು ಕೊಡೆಹಾಳ ಬಸದಿಗೆ ದಾನವಾಗಿ ಕೊಟ್ಟುದನ್ನು ದಾಖಲಿಸಿದೆ.[12] ಇದರಿಂದ ವೈಷ್ಣವ ಮತ್ತು ಜೈನರಲ್ಲಿ ಸಾಮಾಜಿಕ ಹೊಂದಾಣಿಕೆಯ ವಿವರಗಳು ಸ್ಪಷ್ಟವಾದರೆ, ತೊಣ್ಣೂರಿನ 74ನೇ ಶಾಸನವು ಯಾದವಗಿರಿಯ ಕೋಟೆಯ ರಕ್ಷಾಪಾಲಕರಾದ ನೀಲಯ್ಯ ಮತ್ತು ಚಾಮಯ್ಯರೆಂಬುವರ ಪ್ರಸ್ತಾಪವಿದ್ದು ಅವರು ರಕ್ಷಣಾವೃತ್ತಿಯನ್ನು ಮಾಡುತ್ತಿದ್ದುದರಿಂದ ಹೊಲಗಾಹು ಮತ್ತು ಊರಿನ ರಕ್ಷಣೆಗಾಗಿ ನೇಮಿಸಲ್ಪಟ್ಟ ದಲಿತರು ಆಗಿರಬಹುದೆಂದು ಊಹಿಸಬಹುದಾಗಿದೆ.

ಕ್ರಿ.ಶ. 1174ರ ತೊಣ್ಣೂರಿನ ಶಾಸನದಲ್ಲಿ ಲಕ್ಷ್ಮಿನಾರಾಯಣ ಗುಡಿಗೆ ಮಂಟಪವೊಂದನ್ನು ನಿರ್ಮಿಸಿದ ವಿಚಾರ ಪ್ರಸ್ತಾಪವಾಗಿದೆ. ಬಲ್ಲಾಳನ ಹಿರಿಯ ಅಧಿಕಾರಿಗಳಾದ ಮಾಚಯ್ಯ ಮತ್ತು ಕೇಸಿಯಣ್ಣ ಮತ್ತು ಕೊಮ್ಮಣ್ಣ ಹೆಗ್ಗಡೆಯ ರೊಡಗೂಡಿ ಯಾದವಗಿರಿಯ ಲಕ್ಷ್ಮಿನಾರಾಯಣಗುಡಿಗೆ ದೀಪ ಉರಿಸಲು ಒಂದೆತ್ತಿನ ಗಾಣದ ಸುಂಕವನ್ನು ಮತ್ತು ಎಣ್ಣೆಯ ಗಾಣವನ್ನು ದಾನ ಮಾಡಿದ ಬಗ್ಗೆ ಉಲ್ಲೇಖವಿದೆ[13] ತೊಣ್ಣೂರಿನ ಕೃಷ್ಣದೇವಾಲಯದ ಬಳಿಯಿರುವ ಶಾಸನವು ಇಮ್ಮಡಿ ಬಲ್ಲಾಳನ ಕಾಲದ್ದಾಗಿದ್ದು (1177) ಭೋಗನಹಳ್ಳಿ ಹಾಗೂ ಸುತ್ತ ಮುತ್ತಲ ಗ್ರಾಮಗಳನ್ನು ದತ್ತಿ ನೀಡಿದ ವಿಚಾರ ಪ್ರಸ್ತಾಪವಾಗಿದ್ದು ಮಗ್ಗ ಮತ್ತು ಮನೆಗಳಿಂದ ವಸೂಲಾದ ತೆರಿಗೆಗಳನ್ನು 'ವಿತ್ತರುಂದಪೆರುಮಾಳ್' ದೇವರಿಗೆ ಸೇವೆಗೆ ವಿನಿಯೋಗಿಸಬೇಕೆಂದು ಆದೇಶ ಶಾಸನದಲ್ಲಿ ದಾಖಲಾಗಿದೆ. ಹೊಸಕೋಟೆಯ ನಿಷ್ಕಾಮೇಶ್ವರ ದೇಗುಲದ ಗೋಡೆಯ ಮೇಲಿನ ಶಾಸನವು 3ನೇ ನರಸಿಂಹನ ಕಾಲದ್ದಾಗಿದ್ದು ಸ್ಥಾನಪತಿ ನಿಕ್ಕೇಶ್ವರನ ಶಂಭುವಿಗೂ ಉಯಕೊಂಡಪಿಳ್ಳೆಗೂ ದೇವಾಲಯ ಸೇವೆಗೆ ದಾನ ನೀಡಿದ ವಿಚಾರ ಪ್ರಸ್ತಾಪವಾಗಿದೆ.

ತೊಣ್ಣೂರಿನ ಕೃಷ್ಣದೇವಾಲಯದ ಮಹಾದ್ವಾರದ ಬಳಿಯಿರುವ ಶಾಸನವೊಂದರಲ್ಲಿ ಗುಡಿಯ ಮೇಲಿನ ಗೋಪುರವನ್ನು ವೀರಬಲ್ಲಾಳನ ತಿರುಗೋಪುರವೆಂದು ಕರೆದಿರುವುದು ದಾಖಲಾಗಿದೆ. ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದಲ್ಲಿರುವ ಶಾಸನವು 3ನೆ ಬಲ್ಲಾಳನ ಕಾಲದ್ದಾಗಿದ್ದು ಮಹಾಪ್ರಧಾನ ಪೆರುಮಾಲೆ ದಂಡನಾಯಕನ ಮಕ್ಕಳಾದ ಮಾದಪ್ಪ ಮತ್ತು ಕೇತಪ್ಪ ಎಂಬ ಅಧಿಕಾರಿಗಳು ಲಕ್ಷ್ಮಣದಾಸ ಎಂಬ ಅಧಿಕಾರಿಗೆ ಆಡಳಿತ ವಹಿಸಿಕೊಟ್ಟುದನ್ನು ತಿಳಿಸುತ್ತದೆ ತ್ತು ಲಕ್ಷ್ಮಣದಾಸ ಎಂಬ ಪುರೋಹಿತನಿಗೆ ದೇವರ ನಿವೇದನೆಗಾಗಿ 15 ಗುಳಗಳ ಏಲಕ್ಕಿಯನ್ನು ದಾನವಾಗಿ ನೀಡುತ್ತಿದ್ದುದರ ಬಗ್ಗೆ ದಾಖಲಾಗಿದೆ.[14] ತೊಂಡನೂರಿನ ಲಕ್ಷ್ಮಿನಾರಾಯಣ ದೇಗುಲದಲ್ಲಿ 'ತಿರುವಾಯ್‌ಮೊಳಿ' ಗ್ರಂಥ ಪಠಣೆಗೆ ಹಲವಾರು ಏರ್ಪಾಡುಗಳನ್ನು 3ನೆ ಬಲ್ಲಾಳನೂ ಮಾಡಿದ್ದನು. ವಿವಣ್ಣವೆಂಬಾತನು ಪರ್ವದಿನಗಳಂದು 'ತಿರುವಾಯ್ ಮೊಳಿ' ಗ್ರಂಥಪಠಣೆ ಸಮಾರಾಧನೆ ಮತ್ತು ಪ್ರಾಯಶ್ಚಿತ್ತ ಕರ್ಮಕ್ಕಾಗಿ, ದೇವಾಲಯದ ನೈವೇದ್ಯಕ್ಕೋಸ್ಕರವಾಗಿ ವೈಷ್ಣವರಿಂದ ತತ್ಕಾಲೋಚಿತವಾದ ಬೆಲೆಗೆ ಭೂಮಿಯನ್ನು ಕೊಂಡು[15] ಸಹಕರಿಸಿದ ದಾಖಲೆಯಿದೆ.

ತಿರುವಾಯ್ಮೊಳಿಯನ್ನು ಹಾಡುವ ತಿರ್ಯೆಯಾರ್ ಎಂಬ ಹಾಡುಗಾರ ಗೋಮಠದ ರಾಮಪಿರಾನ್ ಜೊತೆಗೂಡಿ ವೀರಬಲ್ಲಾಳ ಮಂಟಪಕ್ಕೆ ಸುಣ್ಣ ಬಳಿಯಲು 500 ಗದ್ಯಾಣಗಳನ್ನು ನೀಡಿದ ಬಗ್ಗೆ ದಾಖಲೆಗೊಂಡಿವೆ. ಶ್ರೀ ರಾಮಾಜುನರು ಮೇಲುಕೋಟೆಯ ಮಣ್ಣನ್ನು 'ತಿರುಮಣ್ಣು' ಎಂದು ಕರೆದುದರಿಂದ ಆ ಭೂಮಿಯ ಒಡೆತನವನ್ನು ತಿರುಮಣ್ಣ ಪೆರುಮಾಳಿಗೆ 1319ರಲ್ಲಿ ದಾನ ಮಾಡಿದ ವಿವರಣೆ ಪಾಂಡವಪುರ 168ನೇ ಶಾಸನದಲ್ಲಿದೆ.

ಹಾಗೆಯೇ 2ನೆ ಬಲ್ಲಾಳನ ಅಧಿಕಾರಿಗಳಲ್ಲಿ ಪ್ರಮುಖರಾದ ಹೆಗ್ಗಡೆ ಮಾಚಯ್ಯ ತಂತ್ರಾಧಿಷ್ಟಕ ಹೆಗ್ಗಡೆ ಸುರಿಗೆಯ ನಾಗಯ್ಯ, ದಂಡನಾಯಕ ಅಚ್ಚತಿಮ್ಮಯ್ಯ ಶ್ರೀಕರಣದ ಹೆಗ್ಗಡೆ, ಇವರುಗಳ ಪೈಕಿ 'ನಾಗಯ್ಯನನ್ನು ಮಹಾಪ್ರಧಾನ ತಂತ್ರಾದಿಷ್ಟನಾಯಕ, ಮಹಾ ಪಸಾಯಿತ ಎಂದು ಕರೆಯಲಾಗಿದ್ದು ಈತನು ವಿಷ್ಣುವರ್ಧನನ ಆದೇಶದನ್ವಯ ತೊಣ್ಣೂರಿನ ಲಕ್ಷ್ಮಿನಾರಾಯಣ ದೇಗುಲದಲ್ಲಿ ಓಲಗ ಶಾಲೆಯನ್ನು ನಿರ್ಮಿಸಿದನು ಮತ್ತು ಮೇಲುಕೋಟೆ ಚಲುವ ನಾರಾಯಣ ದೇಗುಲಕ್ಕೆ ಹಲವಿಧದ ಸೇವೆಗಳನ್ನು ನೀಡಿರುವುದಾಗಿ ತಿಳಿದುಬರುತ್ತದೆ'.[16] ಪಾಂಡವಪುರ ತಾಲ್ಲೂಕು ಹೊಯ್ಸಳರ ಅರಸರು, ಪ್ರಧಾನರುಗಳು, ದಂಡನಾಯಕರುಗಳ ದಾನ, ಕೊಡುಗೆ ಮತ್ತು ಸೇವೆಗಳಿಂದಾಗಿ ಧನ, ಭೂಮಿ, ವಸ್ತುಗಳ ರೂಪದಲ್ಲಿ ಹರಿದು ಬಂದಿದ್ದು ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆ ಹಾಗೂ ಆಡಳಿತ ವ್ಯವಸ್ಥೆಗಳ ಬಗ್ಗೆ ಬೆಳಕು ಚೆಲ್ಲಿರುವುದನ್ನು ಅರಿಯಬಹುದಾಗಿದೆ.

ಪ್ರಪಂಚದ ಇತಿಹಾಸದಲ್ಲಿ ವಿಜಯನಗರದ ಆಳ್ವಿಕೆಯ ಕಾಲವು ಕಿರೀಟ ಪ್ರಾಯವಾದುದು. ಭಾರತೀಯ ಸಂಸ್ಕೃತಿಯ ಪರಂಪರೆಯನ್ನು ಪ್ರಪಂಚದಾದ್ಯಂತ ಪಸರಿಸಿದ ಮತ್ತು ಕನ್ನಡದ ಸಾಂಸ್ಕೃತಿಕ ಲೋಕವನ್ನು ಜಾಗತಿಕ ಮಟ್ಟಕ್ಕೇರಿಸಿದ ಕೀರ್ತಿ ವಿಜಯನಗರದ ಅರಸರಿಗೆ ಸಲ್ಲುತ್ತದೆ. ಅದರಲ್ಲೂ ಕೃಷ್ಣದೇವರಾಯನ ಆಡಳಿತದ ಕಾಲವನ್ನು ಸುವರ್ಣಾಕ್ಷರಗಳಿಂದ ಬರೆದಿಡಬೇಕೆಂಬ ಹಲವು ವಿದ್ವಾಂಸರ ಅಭಿಪ್ರಾಯವನ್ನು ಒಪ್ಪಬೇಕಾದಷ್ಟು ನಿದರ್ಶನಗಳು ಕಣ್ಣ ಮುಂದೆ ನಿಲ್ಲುತ್ತವೆ. ಕ್ರಿ.ಶ. 1336–1565ರವರೆಗೆ ಎರಡು ಶತಮಾನಗಳಿಗೂ ಮೀರಿ ಆಳ್ವಿಕೆ ನಡೆಸಿದ ಸಾಳ್ವ, ತುಳುವ, ಸಂಗಮ ಮತ್ತು ಅರವೀಡು ವಂಶಗಳು ಭಾರತೀಯ ಸಂಸ್ಕೃತಿಯ  ಕಲೆ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ, ಧರ್ಮ, ದರ್ಶನ, ರಾಜ್ಯ ವಿಸ್ತರಣೆ, ಆರ್ಥಿಕ ನೀತಿ, ಸಾಮಾಜಿಕ ವ್ಯವಸ್ಥೆಗಳು ಮುಂದೆಂದೂ ಕಂಡರಿಯದ ವಿಸ್ಮಯಗಳನ್ನು ಸೃಷ್ಟಿಸಿವೆ.

ಹೊಯ್ಸಳ ರಾಜವಂಶದ ಅವನತಿಯ ಕಾಲದಲ್ಲಿ 1336ರಲ್ಲಿ 1ನೆಯ ಹರಿಹರನಿಂದ ವಿಜಯನಗರದ ಆಡಳಿತ ಆರಂಭಗೊಳ್ಳುತ್ತದೆ. ಮೂಲತಃ ತೆಲುಗು ದೇಶದವರಾದ ಇವರು ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿ ವಿರೂಪಾಕ್ಷನನ್ನು ಕುಲದೇವನನ್ನಾಗಿಸಿಕೊಂಡು ಮೆರೆದರು. 1359ರಲ್ಲಿ ಅಧಿಕಾರಕ್ಕೆ ಬಂದ ಬುಕ್ಕರಾಯನು ತನ್ನ ಸಾಮ್ರಾಜ್ಯವನ್ನು ದಕ್ಷಿಣದ ಶ್ರೀರಂಗಪಟ್ಟಣದವರೆಗೂ ವಿಸ್ತರಿಸಿದನು. ಶ್ರೀರಂಗಪಟ್ಟಣ, ಮೇಲುಕೋಟೆ ಮತ್ತು ನಾಗಮಂಗಲದ ಪ್ರದೇಶಗಳನ್ನು ತನ್ನ ಮಗ ವೀರ ಕಂಪಣ್ಣನು ರಾಜ ಪ್ರತಿನಿಧಿಯಾಗಿ ನೋಡಿಕೊಳ್ಳುತ್ತಿದ್ದನು. ಹಲವು ಪ್ರದೇಶಗಳು ರಾಜರ ಕುಟುಂಬದವರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದ್ದವು. ಪಾಂಡವಪುರದಿಂದ ಉತ್ತರ ದಿಕ್ಕಿನಲ್ಲಿರುವ ನಾಗಮಂಗಲದಲ್ಲಿ ಒಂದು ಆಡಳಿತ ಕೇಂದ್ರವನ್ನು ಸ್ಥಾಪಿಸಿದ್ದರು.[16] ತಿಮ್ಮಣ್ಣ ಢಣಾಯಕ ಮತ್ತು ಆತನ ಮಗ ಸಿಂಗಣ್ಣವೊಡೆಯರು ಸಾಮಂತರಾಗಿ ಆಳುತ್ತಿದ್ದು ಮೇಲುಕೋಟೆ, ಶ್ರೀರಂಗಪಟ್ಟಣ, ಹಾಗೂ ಪಾಂಡವಪುರದ ಪ್ರದೇಶಗಳಲ್ಲಿ ಜನೋಪಕಾರಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾನೆ. ಸಿಂಗಣ್ಣವೊಡೆಯನು ಮೇಲುಕೋಟೆಯ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದುದಕ್ಕಾಗಿ 'ಯಾದವಗಿರಿ ಜೀರ್ಣೋದ್ಧಾರಕ'[17] ಎಂದು ಕರೆದಿರುವುದು ಕಂಡುಬರುತ್ತದೆ.

ಇವರ ಕಾಲದಲ್ಲಿ ದಕ್ಷಿಣ ಭಾಗದಲ್ಲಿ ಹಲವಾರು ಪಾಳೆಗಾರ ಮನೆತನಗಳು ತಲೆಯೆತ್ತಿದ್ದವು. ವಿಜಯನಗರದ ಅರಸರುಗಳ ಅದೀನದಲ್ಲಿ ಸ್ವತಂತ್ರರಾಗಿ ಆಳ್ವಿಕೆ ನಡೆಸುತ್ತಿದ್ದುದು ತಿಳಿದುಬರುತ್ತದೆ. ಇವರ ಕಾಲದ ನೂರಕ್ಕೂ ಅಧಿಕ ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ದೊರೆತಿದ್ದು ಅವರ ಆಳ್ವಿಕೆಯನ್ನು ಅರಿಯಲು ನೆರವಾಗುತ್ತವೆ. ವಿಜಯನಗರದ ಇತಿಹಾಸದಲ್ಲಿ ಕೃಷ್ಣದೇವರಾಯನ ಕಾಲವನ್ನು 'ಸುವರ್ಣಯುಗ' ಎಂದು ಕರೆಯಲಾಗಿದೆ. ಅವರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳು, ಗೋಪುರಗಳು, ಕೆತ್ತನೆಗಳು, ಶಿಲ್ಪಕಲೆಗಳು, ಮಂಟಪಶಾಲೆಗಳು, ನವೀನ ಮಾದರಿಗಳಿಂದ ಕೂಡಿದೆ. ಪಾಂಡವಪುರ ತಾಲ್ಲೂಕಿನಲ್ಲಿ ಅವರ ದಾನ–ದತ್ತಿಗಳಲ್ಲಿ ಹೊರತು ಪಡಿಸಿದರೆ ಅಂತಹ ವೈಭವೋಪೀತವಾದ ನಿರ್ಮಿತಿಗಳು ಕಂಡುಬರುವುದಿಲ್ಲ. ಶ್ರೀರಂಗಪಟ್ಟಣದ ರಂಗನಾಥನ ದೇವಾಲಯದಲ್ಲಿ ಇವರ ಪಾಲು ಇರುವುದು ಗೋಚರವಾಗುತ್ತದೆ. ಜೈನವೈಷ್ಣವರ ನಡುವಿನ ಸಂಘರ್ಷವು ಇವರ ಕಾಲದಲ್ಲಿ ಶಾಂತಿಯುತವಾಗಿದ್ದು ವೈಷ್ಣವರ ಮೇಲೆ ಹೆಚ್ಚಿನ ಗಮನ ಮತ್ತು ಪ್ರೋತ್ಸಾಹವನ್ನು ನೀಡಲಾಗಿದೆ.

ಕ್ರಿ.ಶ. 1460ರಲ್ಲಿ ರಚನೆಯಾದ ಶಾಸನವೊಂದು ಪ್ರೌಢದೇವರಾಯನ ಕಾಲಕ್ಕೆ ಸೇರಿದುದಾಗಿದ್ದು ಮೇಲುಕೋಟೆಯ ಪಾತಾಳಾಂಕಣದಲ್ಲಿದೆ. ಅದು ಒಂದು ಗ್ರಾಮವನ್ನು ತಿರುನಾರಾಯಣಪುರ ಅಗ್ರಹಾರವನ್ನಾಗಿ ಪರಿವರ್ತಿಸಿದುದನ್ನು ಉಲ್ಲೇಖಿಸುತ್ತದೆ. ಸೀತಾಪುರ ಶಾಸನವೊಂದು 1467ರ ಕಾಲವೆನ್ನಲಾಗಿದ್ದು. ನಾಗಮಂಲದ ಪ್ರಭು ಸಿಂಗಣ್ಣವೊಡೆಯರ ಮಕ್ಕಳಾದ ದೇವರಾಜನು ತಮ್ಮ ತಾಯಿಯಾದ ಸೀತಾಯಮ್ಮನ ಜ್ಞಾಪಕಾರ್ಥವಾಗಿ ಕಾವೇರಿ ನದಿಗೆ ಅಡ್ಡ ಕಾಲುವೆಯನ್ನು ಕಟ್ಟಿಸಿ ನೀರಾವರಿ ಸೌಲಭ್ಯವೊದಗಿಸಿರುವುದರ ಬಗ್ಗೆ ದಾಖಲಿಸಿದೆ.[18]

ಹರವು ಗ್ರಾಮದ ಶಾಸನವೊಂದರಲ್ಲಿ 'ಪಿರಿಯಣ್ಣವೊಡೆಯರ ಧರ್ಮದ  ಹೆಸರಿನಲ್ಲಿ ರಾಮಸಾಗರದ ಸೀತಾರಾಮನ ತೂಬು ಎಂದು ಹೇಳಿರುವುದಲ್ಲಿದೆ. ಪಿರಿಯಣ್ಣನು ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟಿಸಿ ನೀರಾವರಿ ಬಳಕೆಗಾಗಿ ಅದಕ್ಕೆ ಒಂದು ತೂಬನ್ನು ನಿರ್ಮಿಸಿರುವುದನ್ನು ತಿಳಿಯಬಹುದಾಗಿದೆ.[19] ನರಸನಾಯಕನೆಂಬ ದಂಡನಾಯಕನು ದಕ್ಷಿಣದತ್ತ ದಂಡೆತ್ತಿ ಹೋಗಿ ಕಾವೇರಿನದಿಯ ತಾತ್ಕಾಲಿಕ ಸೇತುವೆಯ ಮೂಲಕ ಶ್ರೀರಂಪಟ್ಟಣವನ್ನು ಆಕ್ರಮಿಸಿಕೊಂಡ ಅಂಶವನ್ನು ಕ್ರಿ.ಶ. 1509ರ ಶ್ರೀರಂಗಪಟ್ಟಣದ ಶಾಸನ ಮತ್ತು ತಾಮ್ರ ಮಟಗಳು ದಾಖಲಿಸಿವೆ.

ಮೇಲುಕೋಟೆಯ 163ನೇ ಶಾಸನದಲ್ಲಿ ಮೇಲುಕೋಟೆಯ ತಿರುನಾರಾಯಣ ದೇವಾಲಯಕ್ಕೆ ಭೂದಾನ ನೀಡಿದುದಾಗಿ ವಿವರಿಸುತ್ತದೆ. ತಿಮ್ಮಣ್ಣ ದಂಡ ನಾಯಕನು ತಿರುನಾರಾಯಣಪುರದ 52 ವೈಷ್ಣವರಿಗೆ ನೀರಾವರಿ ಭೂಮಿಯನ್ನು ದತ್ತಿ ನೀಡಿರುವುದನ್ನು ಪ್ರಸ್ತಾಪಿಸುತ್ತದೆ ಮತ್ತು ತಿರುನಾರಾಯಣಪುರವನ್ನು ದಕ್ಷಿಣದ ಬದರಿಕಾಶ್ರಮ, ಭೂವೈಕುಂಠವೆಂದೂ ಕರೆಯಲಾಗಿದೆ.[20] ಮೇಲುಕೋಟೆಯ 179ನೇ ಶಾಸನವು ನಾಗಮಂಗಲದ ಸಿಂಗಣ್ಣವೊಡೆಯರ ಮಕ್ಕಳು ಮತ್ತು ತಿಮ್ಮಣ್ಣ ದಂಡನಾಯಕನು ತನ್ನ ಧರ್ಮಪತ್ನಿ ರಂಗಾಭಿಕೆಯ ಜ್ಞಾಪಕಾರ್ಥವಾಗಿ ಮೇಲುಕೋಟೆಯ ದೇವಾಲಯಕ್ಕೆ ಬಲ್ಲೇನಹಳ್ಳಿ ಮತ್ತು ಯಾಲದಹಳ್ಳಿಯ ಗ್ರಾಮ ಮತ್ತು ಆ ಎರಡು ಗ್ರಾಮಕ್ಕೆ ಸೇರಿದ ರಂಗಸಮುದ್ರದ ಕೆಳಗಿನ ಭೂಮಿಯನ್ನು ಚೆಲುಪಿಳೆರಾಯರ ಭಂಡಾರಕ್ಕೆ ಉತ್ತು ಬಿತ್ತು ವಾರವನಿಕ್ಕುದ ಗದ್ದೆಯನ್ನು ಸುವರ್ಣದಾಯ, ಸುಂಕಗಳನ್ನು ಪಡೆದುದರ ಪ್ರಸ್ತಾಪವಿದೆ. ಇದರಿಂದ ಪಾಂಡವಪುರದ ಸೀಮೆಯು ಆ ಕಾಲದಲ್ಲಿ ಹೆಚ್ಚಿನ ನೀರಾವರಿ ಅನುಕೂಲ ಹೊಂದಿತ್ತೆಂದು ಅರಿಯಲು ಸಾಕಷ್ಟು ಆಧಾರಗಳು ಲಭ್ಯವಾಗುತ್ತವೆ.

1369ರಲ್ಲಿನ 164ರ ಶಾಸನವು ನಮ್ಮಾಳ್ವಾರರಿಗೆ ಮೈಲನಹಳ್ಳಿಯ ಕೆರೆ, ಕುಂಬಾರಕಟ್ಟೆಯಕೆರೆಯ ಭೂಮಿಯನ್ನು ದೇವಾಲಯದ ಎಣ್ಣೆ ದೀವಿಗೆಗೆ ದಾನ ನೀಡಿದುದನ್ನು ಉಲ್ಲೇಖಿಸುತ್ತದೆ. ಆ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದವರ ವಶಕ್ಕೆ ವಹಿಸಿದುದಲ್ಲದೆ ದೇವಾಲಯದ ಪೂಜೆಗಾಗಿ 2 ಖಂಡುಗ ಭತ್ತ ಮತ್ತು 24 ಗದ್ಯಾಣವನ್ನು ಕಾಣಿಕೆಯ ರೂಪದಲ್ಲಿ ಸಲ್ಲಿಸಬೇಕೆಂದು ನಮ್ಮಾಳ್ವಾರರಿಗೆ ನೀಡಲಾಗಿದೆ. ಮತ್ತು ಮೇಲುಕೋಟೆಯ ಸಂಪತ್ತುಮಾರ ನಾರಾಯಣ ದೇವರಿಗೆ ವಸಂತೋತ್ಸವ ತಿರುನಾಳಿನ ಮಧ್ಯಾಹ್ನದ ಅವಸರ ಸಂದಿಯಲ್ಲಿ ನಿವೇಧನೆ, ನಂದಾದೀವಿಗೆ, ಮನಮಾಲೆಗಳಿಗಾಗಿ ಮುಮ್ಮಡಿ ದೇವರಾಯನು ಭೂದಾನ ಮಾಡಿದುದರ ವಿವರಣೆಯಿದೆ.[21] ಕ್ರಿ.ಶ. 1528 ಶಾಸನವೊಂದು ಮೇಲುಕೋಟೆಯ ಚಲುವನಾರಾಯಣ ಗುಡಿಯಲ್ಲಿದ್ದು ಕೃಷ್ಣರಾಯ ನಾಯಕನೆಂಬುವವನು ಈ ಭಾಗವನ್ನು ಆಳುತ್ತಿದ್ದುದರ ಬಗ್ಗೆ ಪ್ರಸ್ತಾಪಿಸುತ್ತದೆ ಮತ್ತು ಕಾಮನಾಯಕನಹಳ್ಳಿ ಮತ್ತು ಗೊಲ್ಲರ ಚಿಟ್ಟನಹಳ್ಳಿಗಳನ್ನು ಈ ದೇವಾಲಯಕ್ಕೆ ದತ್ತಿ ಬಿಟ್ಟ ಅಂಶಗಳನ್ನು ವಿವರಿಸುತ್ತದೆ. ನಾಗಮಂಗಲದ ಕಾಳಿಂಗನ ಹಳ್ಳಿಯ ಶಾಸನವೊಂದು ಮೇಲುಕೋಟೆಯ ಚೋಳಪ್ಪಯ್ಯನೆಂಬ ಸಾಮಂತನು ಮತ್ತು ಈ ಭಾಗವನ್ನು ಆಳುತ್ತಿದ್ದ ತಿಮ್ಮಯ್ಯನ ಮಗ ಮಲೇಪನಾಯ್ಕನೆಂಬ ಅಧಿಕಾರಿಯ ಹೆಸರನ್ನು ಉಲ್ಲೇಖಿಸುತ್ತಾನೆ.

ಅರಕನಗೆರೆಯ ಶಾಸನದಲ್ಲಿ 1542ರಲ್ಲಿ ನೀಡಿದ ದಾನದ ಬಗ್ಗೆ ಉಲ್ಲೇಖಿಸುತ್ತದೆ. ಮೇಲುಕೋಟೆ ನಾರಾಯಣ ದೇವಾಲಯದ 1544ರ ಶಾಸನವು ಸದಾಶಿವರಾಯನ ಕಾಲದುದಾಗಿದ್ದು ನಂದ್ಯಾಲದ ನಾರಾಯಣ ದೇವನೆಂಬ ಅಧಿಕಾರಿಯ ಅವಧಿಯನ್ನು ತಿಳಿಸುವುದಲ್ಲದೆ. ಭಾಷ್ಯಕಾರ ರಾಮಾನುಜರು ಮತ್ತು ದೇಶಾಂತಿ ಮುದ್ರೆ, ಹನುಮಂತ ಮುದ್ರೆ, ರಾಮಾನುಜಮುದ್ರೆ ಮೊದಲಾದ ರಾಜ ಮುದ್ರೆಗಳ ಬಗ್ಗೆ ವಿವರಣೆ ಒದಗಿಸುತ್ತದೆ.

ಪಾಂಡವಪುರದ 125ನೇ ಶಾಸನವು ತಿರುನಾರಾಯಣ ದೇವಸ್ಥಾನಕ್ಕಾಗಿ ಸೇತೀಪುರ, ಮೈಲನಹಳ್ಳಿ ಮತ್ತು ಅವುಗಳಿಗೆ ಸಲ್ಲುದ ನೀಲಮಂಗಲ, ಹೊಳವಳ್ಳಿ, ಕರನಾರಿಯಳ್ಳಿಗಳನ್ನು ದಾನ ನೀಡಿದ ಬಗ್ಗೆ ವಿವರಿಸುವುದಲ್ಲದೆ, ಅಬ್ಬರಾಜನ ಮಗನಾದ ತಿರುಮಲಾಜಿಯ ನೀಡಿದ ದಾನದಿಂದ ದೇವರ ನಿತ್ಯಪ್ರಸಾದ ಮತ್ತು ಹೊಸದಾಗಿ ನಿರ್ಮಿಸಿರುವ ಕೊಳದಲ್ಲಿ ತೆಪ್ಪೋತ್ಸವ ನಡೆಸಲು ಇದರ ಆದಾಯವನ್ನು ಬಳಸಿಕೊಳ್ಳುವಂತೆ ಆದೇಶಿಸಿರುವುದನ್ನು ಗಮನಿಸಬಹುದಾಗಿದೆ.

ಮೇಲುಕೋಟೆಯ ಕ್ರಿ.ಶ. 1550ರ ಶಾಸನವು ಪಿಳ್ಳೇರಾಜನು ಸಿಂಧಘಟ್ಟದ ತಳವಾರನನ್ನು ನೇಮಿಸಿದುದನ್ನು ಉಲ್ಲೇಖಿಸುತ್ತದೆ. 1551ರ ಶಾಸನವು ನಂದ್ಯಾಲದ ನರಸಿಂಹದೇವ ಮಹಾ ಅರಸನ ಮಗ ತಿಮ್ಮಯ್ಯ ದೇವ ಮಹಾರಸು, ವರಹಾಸ್ವಾಮಿಗೆ ನಗುವನಹಳ್ಳಿಯನ್ನು ದಾನ ನೀಡಿ ದೇಗುಲದ ಪೂಜಾ ಕೈಂಕರ್ಯಕ್ಕಾಗಿ ಹೂದೋಟವೊಂದನ್ನು ಪಾಲಿಸುವ ಬಗ್ಗೆ ಮಾಹಿತಿ ಒದಗಿಸುತ್ತದೆ. ಇಂತಹ ನಾನಾವಿಧದ ದಾನ, ದತ್ತಿ, ಕೊಡುಗೆ, ಅಭಿವೃದ್ಧಿಗಳಿಂದಾಗಿ ವಿಜಯನಗರದ ಅರಸರು, ಸಾಮಂತರು ಮತ್ತು ಶ್ರೀಮಂತ ಮಹಾಜನಗಳು ಸೇವೆಗೈದುದನ್ನು ಇಲ್ಲಿನ ಶಾಸನಗಳು ಪ್ರಮಾಣೀಕರಿಸುತ್ತವೆ.

ಗಂಡುಗಲಿಗಳಂತೆ ಆಳ್ವಿಕೆ ನಡೆಸಿದ ವಿಜಯನಗರದ ಸಾಮ್ರಾಜ್ಯದ ಕೊನೆಯ ವಂಶವಾದ ಅರವೀಡು ವಂಶವು ದುರ್ಬಲ ರಾಜರುಗಳಿಂದ ಕೂಡಿದುದಾಗಿತ್ತು. ಕ್ರಿ.ಶ. 1565ರಲ್ಲಿ ಜರುಗಿನ ತಾಳೀಕೋಟೆ ಕದನವು ವಿಜಯನಗರ ಸಾಮ್ರಾಜ್ಯದ ಆಡಳಿತವನ್ನು

ನಾಮಾವಶೇಷ ಮಾಡಿತು. ಉತ್ತರ ಕರ್ನಾಟಕದ ಬಹುತೇಕ ಪ್ರದೇಶಗಳು ಬಹಮನಿ ಸಾಮ್ರಾಜ್ಯಕ್ಕೆ ವಿಲೀನಗೊಂಡವು. ವಿಜಯನಗರದ ಅರಸರ ಅದೀನದಲ್ಲಿದ್ದ ಸಣ್ಣ ಸಣ್ಣ ಸಂಸ್ಥಾನಗಳು ಸ್ವತಂತ್ರಗೊಂಡು ಅಧಿಕಾರ ನಡೆಸಲು ಮುಂದಾದವು. ಅಂತವುಗಳಲ್ಲಿ ಮೈಸೂರು ಸಂಸ್ಥಾನವು ಪ್ರಮುಖವಾದುದು.

ಕ್ರಿ.ಶ. 1399ರಲ್ಲಿ ಯದುವಂಶದ ಯದುರಾಯ ಎಂಬುವವರಿಂದ ಅರಸು ಮನೆತನವು ಅಸ್ಥಿತ್ವಕ್ಕೆ ಬಂದಿತು ಎಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.ಇವರು ಮೈಸೂರಿಗೆ ಸಮೀಪದ ಹದಿನಾಡು ಮತ್ತು ಕಾರುಗಳ್ಳಿಗಳನ್ನೊಳಗೊಂಡಂತೆ ಆಳ್ವಿಕೆ ಆರಂಭಿಸಿದರು. ಆ ಸಂದರ್ಭದಲ್ಲಿ ಮೈಸೂರು ಸಣ್ಣ ಪ್ರಮಾಣದಲ್ಲಿದ್ದು ಚಾಮರಾಜನು ಪಾಳೆಗಾರನಾಗಿದ್ದನು. ಅಲ್ಲಿ ಜರುಗಿದ ಕೆಲವು ಆಂತರಿಕ ಸಮಸ್ಯೆಗಳಿಗೆ ಬೆಂಬಲ ನೀಡಿದ ಯದುರಾಯ ಮತ್ತು ವಿಜಯರು ನೇರವಾಗಿ ಮೈಸೂರು ಪಾಳೆಪಟ್ಟನಿಂದ ರಾಜಕೀಯಕ್ಕೆ ದುಮುಕಿದರು. ಚಾಮರಾಜನಿಗೆ ಕಿರುಕುಳ ನೀಡುತ್ತಿದ್ದ ಮಾರನಾಯಕನನ್ನು ಮಣಿಸಿ ಚಾಮರಾಜನ ಮಗಳೊಡನೆ ವಿವಾಹವಾಗಿದ್ದು ಚಾಮರಾಜನ ನಿಧನದ ತರುವಾಯ ತಾವೇ ಒಡೆಯರಾದುದರಿಂದ 'ಒಡೆಯರೆಂಬ' ಹೆಸರಿನಿಂದ 1513ರಿಂದ ಮೈಸೂರನ್ನು ರಾಜಧಾನಿಯನ್ನಾಗಿಸಿ ಆಡಳಿತ ನಡೆಸಿದರು. ಅದೇ ವೇಳೆಯಲ್ಲಿ ಪ್ರಬಲರಾಗಿದ್ದ ವಿಜಯನಗರದ ಅರಸರ ಪ್ರಭುತ್ವ ಒಪ್ಪಿಕೊಂಡು ಅವರ ಸಾಮಂತ ರಾಜರಾಗಿ ಮುಂದುವರೆದರು.

ಬೋಳ ಚಾಮರಾಜನ ದುರ್ಬಲ ಆಡಳಿತದ ತರುವಾಯ 1576ರಲ್ಲಿ ರಾಜ ಒಡೆಯರು ಆಡಳಿತ ವಹಿಸಿಕೊಂಡು ಸ್ವತಂತ್ರ ರಾಜನಾದನು. ಶ್ರೀರಂಗಪ್ಪಟಣದಲ್ಲಿ ವಿಜಯನಗರದ ಪ್ರತಿನಿಧಿಯಾಗಿ ಅಧಿಕಾರ ನಡೆಸುತ್ತಿದ್ದ 2ನೇ ತಿರುಮಲನೊಂದಿಗೆ ಸೆಣೆಸಿ ಅಲ್ಲಿಂದ ಓಡಿಸಿ 1610ರಿಂದ ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದನು. ಮಂಡ್ಯ ಜಿಲ್ಲೆಯ ಬಹುತೇಕ ಪ್ರದೇಶಗಳು ನೇರವಾಗಿ ಮೈಸೂರರಸರ ಆಳ್ವಿಕೆಗೆ ಒಳಪಟ್ಟವು. ಇವರ ಕಾಲದಲ್ಲಿ ಮೇಲುಕೋಟೆಯು ವಿಶೇಷವಾದ ದಾನ, ದತ್ತಿ, ಕೊಡುಗೆಗಳಿಂದ ಕೀರ್ತಿಶಾಲಿಯಾದುದಲ್ಲದೆ ಧಾರ್ಮಿಕ ಕೇಂದ್ರವಾಗಿ ಮತ್ತಷ್ಟು ಅಭಿವೃದ್ಧಿಯನ್ನು ಹೊಂದಿತು.

ರಾಜ ಒಡೆಯರು ಮೈಸೂರು ವ್ಯಾಪ್ತಿಯೊಳಗೆ ಸುತ್ತಲಿನ ಪಾಳೆ ಪಟ್ಟುಗಳನ್ನು ವಿಲೀನಗೊಳಿಸಿಕೊಂಡು ತನ್ನ ಗಡಿಯನ್ನು ವಿಸ್ತರಿಸಿಕೊಂಡರು. ನಂತರದಲ್ಲಿ ಅಧಿಕಾರಕ್ಕೆ ಬಂದ ಕಂಠೀರವ ನರಸಿಂಹರಾಜರು (1638–1659) ಉತ್ತಮ ಕಲಿಯಾಗಿದ್ದರು. ಬಿಜಾಪುರದ ಆದಿಲ್‌ಷಾಹಿಗಳನ್ನು ಎದುರಿಸಿ ಹಿಮ್ಮೆಟ್ಟಿಸಿ ಮೈಸೂರು ಸಂಸ್ಥಾನವನ್ನು ಪರಕೀಯರ ಆಕ್ರಮಣದಿಂದ ಕಾಪಾಡಿಕೊಂಡರು. ಮೇಲುಕೋಟೆಯ 214ರ ತಾಮ್ರ ಶಾಸನವೊಂದು "ಮೈಸೂರಿನ ಅರಸರಾದ ಕಂಠೀರವ ನರಸರಾಜ ಒಡೆಯರ್‌ರವರು ಮೇಲುಕೋಟೆಯ ಉತ್ತರಕ್ಕಿರುವ ಸುಖದೊರೆ ಮತ್ತು ಸುತ್ತಲ ಏಳು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಿ ಶ್ರೀವೈಷ್ಣವಬ್ರಾಹ್ಮಣರಿಗೆ ದತ್ತಿ ನೀಡಿ, ಊಟ, ವಸತಿಗಳಿಗಾಗಿ ಅನುಕೂಲ ಒದಗಿಸಿಕೊಟ್ಟುದನ್ನು" [22] ದಾಖಲಿಸುತ್ತದೆ. ಆದರೆ ಇಂದು ಸುಖದೊರೆ ಗ್ರಾಮ ಅಸ್ತಿತ್ವದಲ್ಲಿರುವುದಿಲ್ಲ.

ಅಂತರವಳ್ಳಿಯ ಶಾಸನವು 1657ರೆಂದು ಗುರುತಿಸಲಾಗಿದ್ದು. ನರಸರಾಜ ಒಡೆಯರ್ ಕಾಲದಲ್ಲಿಯೇ ಅರ್ಕೇಶ್ವರ ದೇವಾಲಯದ ನಿರ್ಮಾಣದ ವಿವರಣೆಯನ್ನು ದಾಖಲಿಸುತ್ತದೆ. 1686ರ ಶ್ರೀರಂಗಪಟ್ಟಣದ ತಾಮ್ರಶಾಸನವು ಚಿಕ್ಕದೇವರಾಜರ ವಂಶಾವಳಿಯನ್ನು ವಿವರಿಸಿರುವುದು ತಿಳಿದುಬರುತ್ತದೆ. ಹಾಗೂ ಮೇಲುಕೋಟೆಯ ನಮ್ಮಾಳ್ವಾರ್ ದೇವಾಲಯದ ಬಂಗಾರದ ಒಡವೆಗಳನ್ನು ದಾನ ನೀಡಿದ ಬಗ್ಗೆ ದಾಖಲಿಸಿದೆ ಮತ್ತು ತೊಂಡನೂರು ಮತ್ತು ಅತ್ತಿಕುಪ್ಪೆ ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿದ ಬಗ್ಗೆ ವಿವರಿಸುತ್ತದೆ. ಕೆ.ಆರ್.ಪೇಟೆಯ ಚಟ್ಟಂಗೆರೆ ಶಾಸನವು ಎರಡನೆ ಕೃಷ್ಣರಾಜ ಒಡೆಯರ್ ಕಾಲದ್ದಾಗಿದ್ದು. ಚಟ್ಟಮಗೆರೆ ಗ್ರಾಮವನ್ನು ಹೈದರನು ಖರೀದಿಸಿ ತೊಣ್ಣೂರಿನ ನೀಲಾವಸೂದ್ ಖಾದಿ ಫೀರ್ ದರ್ಗಾದಲ್ಲಿ ನಡೆಯುವ ವಾರ್ಷಿಕ ಉರುಸ್‌ನಲ್ಲಿ ಬಡಜನರ ಅನ್ನದಾನಕ್ಕಾಗಿ ಉಂಬಳಿ ಬಿಟ್ಟ ವಿಚಾರವನ್ನು ದಾಖಲಿಸುತ್ತದೆ.

ಚಿಕ್ಕದೇವರಾಜ ಒಡೆಯರು ರಾಮಾನುಜರ ತಿರುನಕ್ಷತ್ರದ ಆಚರಣೆಯಲ್ಲಿ ನಡೆಯುವ ಸೇವೆಗಳಿಗಾಗಿ ದತ್ತಿ, ದೇಣಿಗೆಗಳನ್ನು ನೀಡಿರುವುದಲ್ಲದೆ. ನಾರಾಯಣ ದೇವರಿಗೆ ಚಿನ್ನದ ಹಸ್ತಾಭರಣಗಳನ್ನು ಕೊಡುಗೆಯಾಗಿ ನೀಡುತ್ತಾರೆ. (ಎ.ಕ.ಪಾಂ.ಮ ಸ. 169 ಕು.ಕ.ಅ.ಸಂ 1977) ಹೀಗೆ ಕೊಡುಗೆ, ದಾನ, ದತ್ತಿಗಳಿಂದ ಸಮಾಜಕಾರ್ಯ ಮತ್ತು ಧಾರ್ಮಿಕ ಸೇವೆಯನ್ನು ಮಾಡುತ್ತಿದ್ದುದರ ಜೊತೆಗೆ ರಾಜ್ಯ ವಿಸ್ತರಣೆಯಲ್ಲಿಯೂ ಗಮನಹರಿಸಲಾಗಿದೆ

ಮೈಸೂರು ಸಂಸ್ಥಾನವನ್ನು ಕಬಳಿಸಲು ಯತ್ನಿಸುತ್ತಿದ್ದ ಮರಾಠ ಪೇಶ್ವೆಗಳು, ಹೈದರಾಬಾದಿನ ನಿಜಾಮ ಹಾಗೂ ಆಂಗ್ಲರೊಡನೆ ನಡೆಸಿದ ಎರಡೂ ಕದನಗಳು ಮೈಸೂರು ಇತಿಹಾಸದಲ್ಲಿ ಪ್ರಸಿದ್ಧವಾದವು. 1769ರಲ್ಲಿ ಮರಾಠರು ಮತ್ತು ಆಂಗ್ಲರ ನಡುವೆ ಪಾಂಡವಪುರದ ಚಿನಕುರಳಿಯಲ್ಲಿ ಸಂಭವಿಸಿದ ಘೋರ ಯುದ್ಧದಲ್ಲಿ ಮೇಲುಕೋಟೆಯು ನೇರವಾಗಿ ಗುರಿಯಾಯಿತು. ದೇವಾಲಯದ ಬಂಗಾರದೊಡವೆಗಳನ್ನು ಮರಾಠರು ಲೂಟಿಗೈದರು ಮೇಲುಕೋಟೆಯು ವ್ಯವಸ್ಥಿತವಾಗಿ ಆಕ್ರಮಣಕಾರರ ತುತ್ತಾಯಿತಲ್ಲದೆ ಸಾಕಷ್ಟು ಸಂಪತ್ತು ಕೊಳ್ಳೆಹೊಡೆಯಲ್ಪಟ್ಟಿತು. ರಥಕ್ಕೆ ಬೆಂಕಿಯಿಟ್ಟು ಕಬ್ಬಿಣದ ವಸ್ತುಗಳನ್ನು ಸಹ ಕೊಂಡೊಯ್ದರು. ಇದರಿಂದ ಮೇಲುಕೋಟೆಯು ದೂಳೀಪಟವಾಯಿತು. ಬ್ರಿಟೀಷರು, ಮರಾಠರು, ಸೇರಿದಂತೆ ನಡೆಸಿದ ದಾಳಿಗಳು, ಸೋಲುಗಳು ಆದ ನಷ್ಟಗಳು ಹೈದರಾಲಿಯನ್ನು ಪದೇ ಪದೇ ಅವಮಾನಕ್ಕೆ ಗುರಿ ಮಾಡುತ್ತಿದ್ದವು. ಸಣ್ಣ ಪುಟ್ಟ ಸಂಸ್ಥಾನಗಳಲ್ಲಿ ತಲೆದೋರಿದ ಆಂತರಿಕ ಬಿಕ್ಕಟ್ಟುಗಳು ಮೈಸೂರು ಅರಸರ ಅದಕ್ಷತೆ ಮತ್ತು ನೆರೆಹೊರೆಯ ಸಂಸ್ಥಾನಗಳ ಅನ್ಯೆಕ್ಯತೆಯನ್ನು ಲಾಭವನ್ನು ಪಡೆದುಕೊಂಡು ಹಂತಹಂತವಾಗಿ ಅವೆಲ್ಲವುಗಳನ್ನು ವಶಕ್ಕೆ ತೆಗೆದುಕೊಂಡನು. ಸ್ವತಂತ್ರ ನವಾಬನೆಂದು ಗುರುತಿಸಿಕೊಂಡು ಮೈಸೂರು ಸಂಸ್ಥಾನದ ರಕ್ಷಕನಾಗಿ ತಲೆಯೆತ್ತಿದನು. 1761ರಲ್ಲಿ ಅಧಿಕಾರವನ್ನು ಹಿಡಿದರೂ ಪ್ರಾಂತ್ಯವನ್ನು ಸುಭದ್ರಗೊಳಿಸಲು ಹೆಣಗಿದನು. ಪದೇ ಪದೇ ನಡೆದ ಆಕ್ರಮಣಗಳಿಂದ ಜರ್ಜರಿತನಾಗಿ ಸತತ ಹೋರಾಟಗಳಿಂದ ಅನಾರೋಗ್ಯಕ್ಕೆ ತುತ್ತಾಗಿ ಮರಣಿಸಿದನು.

ಹೈದರನ ಪರಿಶ್ರಮ ಮತ್ತು ಚಾಣಾಕ್ಷತೆಗಳಿಂದ ಗಳಿಸಿದ ಸಾಮ್ರಾಜ್ಯದ ಒಡೆತನ ಟಿಪ್ಪುವಿಗೆ ದೊರೆಯಿತಾದರೂ ಪರಿಸ್ಥಿತಿ ಸುಖಕರವಾಗಿರಲಿಲ್ಲ ಆಗಾಗ ನಡೆಯುತ್ತಿದ್ದ ವೈರಿಗಳ ಉಪಟಳವನ್ನು ಹತ್ತಿಕ್ಕಲು ಹೋರಾಡುತ್ತಲೇ ಬಂದನು. ಪರಿಣಾಮವಾಗಿ 1782–99ರಲ್ಲಿ ಟಿಪ್ಪುವನ್ನು ಛಿದ್ರಗೊಳಿಸಿದವು. 3ನೇ ಮೈಸೂರು ಯುದ್ಧದಲ್ಲಿ ಪಡೆದ ಸೋಲು ಮಕ್ಕಳನ್ನು ಬ್ರಿಟೀಷರಿಗೆ ಒತ್ತೆಯಿಟ್ಟರೂ ತೀರಲಿಲ್ಲ. ನಾಲ್ಕನೇ ಮೈಸೂರು ಯುದ್ಧ ಅವನನ್ನು ಬಲಿ ತೆಗೆದುಕೊಂಡಿತು. ಪರಿಣಾಮವಾಗಿ ಮೈಸೂರು ನಾಲ್ಕು ಹೋಳುಗಳಾಗಿ ವಿಭಾಗವಾಯಿತು. ಹೈದರಾಬಾದಿನ ನಿಜಾಮ, ಮರಾಠರು ಬ್ರಿಟೀಷರು ಹಾಗೂ ಮೈಸೂರುಗಳಲ್ಲಿ ಮೈಸೂರು ಒಡೆಯರ ಪಾಲಾಯಿತು.

ಟಿಪ್ಪು ಬ್ರಿಟೀಷರನ್ನು ಭಾರತದಿಂದ ಹೊಡೆದೋಡಿಸಲು ಪಣತೊಟ್ಟವನಾಗಿದ್ದುದಲ್ಲದೆ ಉತ್ತಮ ಆಡಳಿತಗಾರನಾಗಿದ್ದನು. ಟರ್ಕಿ ಮತ್ತು ಆಫ್ಘಾನಿಸ್ಥಾನದ ಮುಸಲ್ಮಾನರ ಬೆಂಬಲದಿಂದ ವಾಣಿಜ್ಯ ಮತ್ತು ಉತ್ತಮ ಬಾಂಧವ್ಯ ಹೊಂದಿದ್ದನು. ಆದರೆ ಟಿಪ್ಪುವಿನ ಕಾಲದಲ್ಲಿ ಸ್ಥಳೀಯ ಜನಸಾಮಾನ್ಯರ ಸ್ಥಿತಿ ಸಂತಸದಾಯಕವಾಗಿರಲಿಲ್ಲ. ಅವನೊಬ್ಬ ಭಾಷಾಂಧನಾಗಿದ್ದು ಪರ್ಷಿಯನ್ ಭಾಷೆಯನ್ನು ಬಳಕೆಗೆ ತಂದನು. ಹಿಂದೂಗಳನ್ನು ಬಲವಂತವಾಗಿ ಮುಸ್ಲಿಂ ಧರ್ಮಕ್ಕೆ ಮತಾಂತರ ಮಾಡುತ್ತಿದ್ದನು. “ಬ್ರಾಹ್ಮಣ ನಾಮಧಾರಿಗಳು ಎದುರಾದರೆ ಅವರ ಹಣೆ ಮೇಲಿನ ನಾಮವನ್ನು ನಾಲಿಗೆಯಿಂದ ನೆಕ್ಕಿ ಬಿಡುತ್ತಿದ್ದನು. ಚನ್ನಗಿರಿಯ ಹಿಂದೂ ಪಾಳೆಯಗಾರನಾದ ದೋಂಡಿಯವಾಘನು ಶ್ರೀರಂಗಪಟ್ಟಣಕ್ಕೆ ಬಂದಾಗ ಆತನನ್ನು ಬಲವಂತವಾಗಿ ಇಸ್ಲಾಂಧರ್ಮಕ್ಕೆ ಮತಾಂತರಿಸಿದನು. ಇಸ್ಲಾಂ ಪ್ರಭುತ್ವದ ಎದುರು ಹಿಂದು ಪ್ರಭುತ್ವ ತಲೆಯೆತ್ತದಂತೆ ಮಾಡಿದನು”.[23] ಮತ್ತೆ ಅವನನ್ನು ಬಂಧಿಸಿ ‘ಇನ್‌ವ್ಯಾನ್‌ಡಂಜನ್’ನಲ್ಲಿ ಸೆರೆಯಲ್ಲಿಡಲಾಯಿತು. ಹಲವು ದೇವಾಲಯಗಳನ್ನು ಮಸೀದಿಯನ್ನಾಗಿ ಪರಿವರ್ತಿಸಿಕೊಂಡಿದ್ದನು ಎಂಬುದಾಗಿ ವಿವರಿಸುತ್ತದೆ.

ತೊಣ್ಣೂರಿನ ನೀಲಾ ಮಸೂದ್ ಖಾದ್ರಿ ಪೀರ್’ ದರ್ಗಾವು ಒಂದು ಹಿಂದೂ ದೇವಾಲಯವಾಗಿತ್ತು. ಅದರ ಸುತ್ತಲಿರುವ ಸಾಲು ಮಂಟಪಗಳು. ಕಲ್ಲಿನ ಕಂಬ ಗರ್ಭಗುಡಿ, ಪ್ರಾಕಾರ ಇವೆಲ್ಲವೂ ಹಿಂದೂ ದೇವಾಲಯವೇ ಆಗಿದ್ದು ದರ್ಗಾವಾಗಿ ಟಿಪ್ಪು ಪರಿವರ್ತಿಸಿರುವುದು ಸ್ಪಷ್ಟವಾಗುತ್ತದೆ. “ಶ್ರೀರಂಗಪಟ್ಟಣದ ಮಸೀದಿಯು ಯಾವ ಮೂಲೆಯಿಂದಾದರೂ ಅದು ಹಿಂದೂ ದೇವಾಲಯವೇ ಆಗಿದೆ. ಸುತ್ತಲಿನ ಸಾಲು ಪಂಟಪಗಳು, ವಿಶಾಲ ಪ್ರಾಕಾರ, ಈಶಾನ್ಯಮೂಲೆಯ ದೇಗುಲದ ಆವರಣದ ಬಾವಿ, ಗರ್ಭಗುಡಿ, ಸುಕನಾಸಿನಿ, ಕೆತ್ತನೆಯಲ್ಲಿ ಅಧೋಮುಖಿ ಕಮಲ, ಇವೆಲ್ಲವುಗಳನ್ನು ಗಮನಿಸಿದಾಗ ಅವನ ಮುಸ್ಲಿಂ ಪ್ರಜ್ಞೆಯ ತಂತ್ರಗಾರಿಕೆ ನೆನಪಾಗುತ್ತದೆ”.[24] ಹಿಂದೂ ದೇವಾಲಯವೊಂದು ಮುಸ್ಲಿಂ ಮದರಸ ಆಗಿ ಪರಿವರ್ತನೆಗೊಂಡಿರುವುದನ್ನು ಸೂಚಿಸುತ್ತದೆ.

ಹಲವು ದೇಗುಲಗಳೀಗೆ ದಾನ, ದತ್ತಿಗಳನ್ನು ನೀಡಿದ್ದಾನೆ. ನಂಜನಗೂಡಿನ ದೇವಾಲಯಕ್ಕೆ ಕೊಡುಗೆಯನ್ನು ನೀಡಿ ‘ಹಕೀಂನಂಜುಂಡ’ನೆಂದು ಗೌರವಿಸಿದ್ದಾನೆ. ಶ್ರೀರಂಗಪಟ್ಟಣದ ರಂಗನಾಥ ದೇವಾಲಯಕ್ಕೆ ಕೊಡುಗೆಗಳನ್ನು ನೀಡಿದ್ದಾನೆ. ಮೇಲುಕೋಟೆಯ ಚಲುವನಾರಾಯಣ ದೇವಾಲಯಕ್ಕೆ ಬೆಳ್ಳಿಯ ಬಟ್ಟಲುಗಳು, ತಾಳಂಜಿ, ಉದ್ದರಣೆ, ಬಂಗಾರದ ಬಟ್ಟಲು, ಹೆಣ್ಣಾನೆ

8

ಮತ್ತು ಗಂಡಾನೆಗಳನ್ನು ಕೊಡುಗೆಯಾಗಿ ನೀಡಿದ್ದಾನೆ. (ಎ.ಕ.ಪಾಂಪು–6, ಸಂ 171–197) ತೊಣ್ಣೂರು ಕೆರೆಯ ನೀರನ್ನು ಕುಡಿದು ತೃಪ್ತಿಯಿಂದ ಅದನ್ನು 'ಮೋತಿ ತಲಾಬ್' ಎಂದು ಕರೆದಿದ್ದಾನೆ. ಮರಾಠರು ಆಕ್ರಮಣ ಮಾಡುವ ಸಂದರ್ಭದಲ್ಲಿ ಕೆರೆಯನ್ನು ಒಡೆಸಿ ನೀರನ್ನು ಬರಿದು ಮಾಡಿ ಅವರಿಗೆ ಕುಡಿಯುವ ನೀರು ಸಿಗದಂತೆ ಎಚ್ಚರವಹಿಸಿದ್ದಾನೆ. ಟಿಪ್ಪುವಿನ ಸಹಾಯಕ್ಕೆ ಬಂದ ಫ್ರೆಂಚ್ ಸೈನ್ಯವು ಪಾಂಡವಪುರದಲ್ಲಿ ಹೆಚ್ಚುಕಾಲ ತಂಗಿದ್ದರು. ಆ ಹಿನ್ನೆಲೆಯಲ್ಲಿ ಅದನ್ನು 'ದಂಡು' 'ಫ್ರೆಂಚ್‌ರಾಕ್ಸ್' ಎಂದೂ ಕರೆಯುವುದುಂಟು. ಕನ್ನಂಬಾಡಿ ಕಟ್ಟೆಯ ನಿರ್ಮಾಣಕ್ಕೆ ಯೋಜನೆಯನ್ನು ರೂಪಿಸಿದವನು ಟಿಪ್ಪು ಎಂದು ತಿಳಿದುಬರುತ್ತದೆ. ಟಿಪ್ಪುವಿನ ಕಾಲದಲ್ಲಿ ಮೇಲುಕೋಟೆಯ ಚಲುವನಾರಾಯಣನ ಗುಡಿಯೊಳಗೆ ಪ್ರವೇಶಿಸುವ ಹಕ್ಕನ್ನು ರಾಮಾನುಜರು ನೀಡಿದ್ದರು. ದಿವಾನ್ ಪೂರ್ಣಯ್ಯನವರು ಈ ಹಕ್ಕನ್ನು ಕಸಿದುಕೊಂಡು ಗುಡಿಯ ಮುಂಭಾಗದ ಗರುಡಗಂಭದವರಿಗೆ ಅದನ್ನು ಮೊಟಕುಗೊಳಿಸಿದ್ದರು. ಟಿಪ್ಪುವಿನ ಮರಣದ ನಂತರ ದಿವಾನ್ ಪೂರ್ಣಯ್ಯನವರು ಮೈಸೂರು ಸಂಸ್ಥಾನದ ಜವಾಬ್ದಾರಿಯನ್ನು ಹೊತ್ತರು. ಪರಿಣಾಮದಿಂದ ಬಹುಬೇಗ ಪ್ರಗತಿಯ ದಾರಿ ಹಿಡಿದು ಮಾದರಿ ಸಂಸ್ಥಾನವೆಂದು ಕರೆಯಲ್ಪಟ್ಟಿತು

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪಾಂಡವಪುರ ತಾಲ್ಲೂಕಿನಾದ್ಯಂತ ಅಭಿವೃದ್ಧಿ ಕೆಲಸಗಳು ನಡೆದಿರುವುದು ಗೋಚರಿಸುತ್ತದೆ. 1817ರ ಮೇಲುಕೋಟೆಯ ಶಾಸನವೊಂದು ಕಲ್ಯಾಣಿಯ ವಾಯುವ್ಯ ಮೂಲೆಯಲ್ಲಿರುವ ಪ್ರಖ್ಯಾತ ಭುವನೇಶ್ವರ ಮಂಟಪವನ್ನು ಕಟ್ಟಿಸಿರುವುದಾಗಿ ಮಾಹಿತಿ ಒದಗಿಸುತ್ತದೆ. 1818ರ ಕನ್ನಂಬಾಡಿಯ ಶಾಸನವೊಂದು ಗಂಗಡಿಕಾರನಾದ ಬೋರೇಗೌಡ ಎಂಬ ಅಧಿಕಾರಿಯು ಮಹಾಕಾಳಿ ದೇವಾಲಯವನ್ನು ಕಟ್ಟಿಸಿದುದರ ಬಗ್ಗೆ ವಿವರಿಸುತ್ತದೆ. 1829ರ ಶಾಸನವೊಂದು ಮುಮ್ಮಡಿ ಕೃಷ್ಣರಾಜರ ಆದೇಶದನುಸಾರವಾಗಿ ಪಿಳ್ಳೆ ಲೋಕಾಚಾರ್ಯರ ವಿಗ್ರಹವನ್ನು ಪ್ರತಿಪಾದಿಸಿದನು.

1818ರ ಮೇಲುಕೋಟೆಯ ಶಾಸನವು ದೇವಾಲಯದ ಜೀರ್ಣೋದ್ಧಾರ ಮಾಡಿದ ಮತ್ತು ಪೂಜಾ ಉಪಕರಣಗಳು ಬೆಲೆ ಬಾಳುವ ಆಭರಣಗಳು ಹಳದಿ ಪೀತಾಂಬರದ ಮೊದಲಾದವುಗಳನ್ನು ಕಾಣಿಕೆ ನೀಡಿದುದಲ್ಲದೆ ಮುತ್ತು ಮಾಣಿಕ್ಯಗಳಿಂದ ಕೂಡಿದ ವೈರಮುಡಿ ಕಿರೀಟವನ್ನು ಚಲುವನಾರಾಯಣನಿಗೆ ಮಾಡಿಸಿಕೊಡುತ್ತಾರೆ. 1842ರ ಶಾಸನವೊಂದು ಲಿಂಗರಾಜಮ್ಮಣ್ಣಿಯವರು ಬೆಟ್ಟದ ನರಸಿಂಹನಿಗೆ ಬಂಗಾರದ ಕಿರೀಟವೊಂದನ್ನು ಮಾಡಿಸಿ ಕೊಟ್ಟುದನ್ನು ವಿವರಿಸುತ್ತದೆ.

ಇದರಿಂದ ಮೈಸೂರು ಅರಸರ ಕಾಲದಲ್ಲಿ ಮೇಲುಕೋಟೆಯು ಧಾರ್ಮಿಕವಾಗಿ ಮೇಲ್ಮೆಯನ್ನು ಸಾಧಿಸಿದದು ಸ್ಪಷ್ಟವಾಗುತ್ತದೆ. ಕಲ್ಯಾಣಿಯಲ್ಲಿ ಹಂತಗಳ ನಿರ್ಮಾಣ, ಗೋಪುರ ನಿರ್ಮಾಣ, ಕೊಡುಗೆ, ಉಂಬಳಿ, ದಾನ, ಕಾಲುವೆ, ಕೆರೆ ಕಟ್ಟೆಗಳ ನಿರ್ಮಾಣ, ಅಗ್ರಹಾರಗಳ ಸ್ಥಾಪನೆ, ಅರ್ಚಕರಿಗೆ ಮನೆಗಳ ನಿರ್ಮಾಣ, ವೇತನ ಮುಂದುವರಿಕೆಗಳು ಮುಂತಾದವು ಯಾವ ಅಡೆ–ತಡೆಗಳಿಲ್ಲದೆ ನಡೆದು ಬಂದವು ವೈರಮುಡಿ ಮತ್ತು ಇನ್ನಿತರ ಪೂಜಾ ಕೈಂಕರ್ಯಗಳು ಮೈಸೂರು ಒಡೆಯರ ಕೃಪಾಕಟಾಕ್ಷದಿಂದ ವೈಭವೋಪೇತವಾಗಿ ಆಚರಣೆಗೊಳ್ಳುತ್ತಾ ಬಂದಿವೆ.

ಹೀಗೆ ಆಯಾ ಕಾಲದ ರಾಜ ಮಹಾರಾಜರುಗಳು ಮತ್ತು ಆಳರಸರುಗಳು ಕೆತ್ತಿಸಲ್ಪಟ್ಟ ಶಾಸನಗಳ ಸಮಗ್ರ ಅಧಯಯನಗಳು ಮತ್ತು ಸಂಶೋಧನೆಗಳಿಂದ ಆ ಕಾಲದ ಹಾಗೂ ಆಯಾ ಪ್ರದೇಶದ ಸಂಸ್ಕೃತಿಯನ್ನು ಬಹುಮುಖಿಯಾಗಿ ಅರಿಯಲು ಹಾಗೂ ಕಟ್ಟಲು ಸಾಧ್ಯವಾಗಬಲ್ಲದು. ಈ ಹಿನ್ನೆಲೆಯ ಶಾಸನಗಲ ಹಾಗೂ ಪೂರಕ ಸಾಹಿತ್ಯ ಕೃತಿಗಳ ಮೂಲಕ ಪಾಂಡವಪುರ ತಾಲೂಕಿನ ಸಂಸ್ಕೃತಿಯ ಹುಡುಕಾಟವನ್ನು ಮಾಡಲಾಗಿದೆ.

ಕೊನೆ ಟಿಪ್ಪಣಿಗಳು

1. ಎ.ಕ.ಸಂ.6 ಸಂಖ್ಯೆ 66. ಕು.ಕ.ಅ.ಸಂ, 1976
2. ಅದೇ. ಶಾಸನ ಸಂಖ್ಯೆ 47
3. ಅದೇ. ಶಾಸನ ಸಂಖೆ16
4. ಪಾರ್ಥಸಾರಥಿ.ಟಿ.ಎ, ಪು.79 ಮಂಡ್ಯ ಜಿಲ್ಲೆ ಗೆಜೆಟಿಯರ್, ಕರ್ನಾಟಕ ಸರ್ಕಾರ 2003

5. ಎ.ಕ.6, ಸಂ. 183, ಕು.ಕ.ಅ.ಸಂ, ಮೈ.ವಿ.ವಿ. 1976
6. ಎ.ಕ. 6ಪಾ.ಪು. 51.52, ಕು.ಕ.ಅ.ಸಂ, ಮೈ.ವಿ.ವಿ. 1976
7. ನಾಗರಾಜು ಎಸ್. ಕರ್ನಾಟಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಜನಜೀವನ ಕನ್ನಡ ಸಾಹಿತ್ಯ ಚರಿತ್ರೆ. ಸಂ. 2 ಮೈ.ವಿ.ವಿ 1975
8. ಪಾರ್ಥಸಾರಥಿ ಟಿ.ಎ, ಮಂಡ್ಯ ಜಿಲ್ಲಾ ಗೆಜೆಟಿಯರ್ ಪು.55,ಕರ್ನಾಟಕ ಸರ್ಕಾರ 2003
9. ಷೇಕ್ ಆಲಿ, ಕರ್ನಾಟಕದ ಇತಿಹಾಸ ಸಂಪುಟ 1, ಪು 139, ಕನ್ನಡ ವಿ.ವಿ. ಹಂಪಿ–1996
10. ರಾಜಗೋಪಾಲನ್ ಎಚ್.ಎಸ್, ಪು. 194, ಲೋಕಪಾವನ ಸ್ಮರಣಸಂಚಿಕೆ, 2008
11. ಎ.ಕ.ಪಾ.ಪು.6, ಶಾ.11, ಕು.ಕ.ಅ.ಸಂ, ಮೈ.ವಿ.ವಿ. 1976
12. ಎ.ಕ.ಪಾಂ.ಪು.6ಶಾ.15 ಕು.ಕ.ಅ.ಸಂ, ಮೈ.ವಿ.ವಿ. 1976
13. ಎ.ಕ.ಪಾ.ಪು.ಸ.63, ಕು.ಕ.ಅ.ಸಂ, ಮೈ.ವಿ.ವಿ. 1976
14. ಅದೇ. ಸಂ. 161
15. ಅದೇ,ಸಂ.68
16. ಅದೇ, ಸಂ. 73, 124
17. ಎ.ಕ. 5 ಶ್ರೀ.ಪ. ಸಂ. 93
18. ಎ.ಕ.6 ಸಂ 19.
19. ಅದೇ. 18
20. ಅದೇ 163
21. ಅದೇ, 164, 152
22. ಎ.ಕ.ಪಾಂಪು.6, ಸಂ.214 ಕು.ಕ.ಅ.ಸಂ 1977
23. ಪಾಲಾಕ್ಷ ,ಸಮಗ್ರ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ ಪು. 49, ಶಶಿ ಪ್ರಕಾಶನ,ತಿಪಟೂರು–2000
24. ಡಾ.ಕೃಷ್ಣಮೂರ್ತಿ ಹನೂರು ಮತ್ತು ಡಾ.ಎಂ,ಜಿ ಮಂಜುನಾಥ್ ಅವರೊಡನೆ ಕ್ಷೇತ್ರಕಾರ್ಯಕ್ಕೆ ಹೋದಾಗಿನ ಅಭಿಪ್ರಾಯಗಳು.



ಡಾ. ರಾಜೇಶ್ ಜೆ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ
ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಪದವಿ ಸಂಜೆ ಕಾಲೇಜು
ಕೆ.ಆರ್ ರಸ್ತೆ, ಬೆಂಗಳೂರು 560004